ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು
ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ, ಕಲಬುರಗಿ

# ಸೇವಾವಾಣಿ

ಮಾರ್ಚ್ 2025

March 2025







## "ಆರ್ಬಿಟ್ ಸಮಾಜ ಸೇವಾ ಸಂಸ್ಥೆ, ಹುಮ್ನಾಬಾದ್ ವತಿಯಿಂದ ಕ್ಯಾನ್ಸರ್ ಕುರಿತು ಜಾಗೃತಿ ಜಾಥಾ ಕಾರ್ಯಕ್ರಮ"

ಔರಾದ್ ತಾಲೂಕದಲ್ಲಿ 11 ಫೆಬ್ರವರಿ 2025 ರಂದು ಆರ್ಬಿಟ್ ಸಮಾಜ ಸೇವಾ ಸಂಸ್ಥೆ, ಹುಮ್ನಾಬಾದ್ ವತಿಯಿಂದ ಔರಾದ್ ನಗರದ ಕೃಷಿ ಉತ್ಪನ್ನ ಮಾರುಕಟ್ಟೆಯಿಂದ ತಾಲ್ಲೂಕು ಆಸ್ಪತ್ರೆಗೆ ಸ್ಥಳಾಂತರವಾಗುವವರೆಗೆ ಕ್ಯಾನ್ಸರ್ ಕುರಿತು ಜಾಗೃತಿ ಜಾಥಾ ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆ ಬೀದರ್ ಜಿಲ್ಲೆಯಲ್ಲಿ ಸುಮಾರು 30 ವರ್ಷಗಳಿಂದ ಸಮಾಜ ಸೇವೆ ಮಾಡುತ್ತಿದ್ದು, ಇತ್ತೀಚೆಗೆ ಅನೇಕ ಮಂದಿ ಕ್ಯಾನ್ಸರ್ ಕಾಯಿಲೆಗೆ ತುತ್ತಾಗಿ ತಮ್ಮ ಪ್ರಾಣವನ್ನು ಕಳೆದು ಕೊಳ್ಳುತ್ತಿರುವುದರಿಂದ ಜನರಲ್ಲಿ ಜಾಗೃತಿ ಮೂಡಿಸುವ ಹಾಗೂ ಅವರ ಜೀವನವನ್ನು ಸುಧಾರಿಸುವ ಅವಶ್ಯಕತೆಗೋಸ್ಕರ ಈ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಆರ್ಬಿಟ್ ಸಂಸ್ಥೆಯ ನೀರ್ದೇಶಕರಾದ ಪಾ. ವಿಕ್ಟರ್ ವಾಸ್ ರವರು ತೀಳಿಸಿದರು. ಜಾಥಾದಲ್ಲಿ ಜನರಿಗೆ ಕ್ಯಾನ್ಸರ್‌ನಿಂದ ಆಗುವ ದುರುಪಯೋಗಗಳು. ಜನರಲ್ಲಿರುವ ಮೂಢನಂಬಿಕೆಯನ್ನು ಹೊಗಲಾಡಿಸ ಅರಿವಿನ ಹಾಡುಗಳನ್ನು ಹಾಡುವುದರ ಮೂಲಕ ಜನರಿಗೆ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸಲಾಯಿತು. ಸರಕಾರಿ ಶಾಲೆಯ ಮಕ್ಕಳು ಕ್ಯಾನ್ಸರ್ ಪ್ಲಕ್ಕರ್ ಕೈಯಲ್ಲಿ ಹಿಡಿದುಕೊಂಡು ಘೋಷಣೆಗಳನ್ನು ಹೇಳುತ ಜಾಥವನ್ನು ಮಾಡಲಾಗಿತ್ತು. ಕಾರ್ಯಕ್ರಮವನ್ನು ಔರಾದ್ ತಾಲೂಕು ದಂಡಾಧಿಕಾರಿಗಳು ಮಲ್ಲಶೆಟ್ಟಿ ಚಿದ್ರೆ ರವರು ಉದ್ಘಾಟಿಸಿ ಮಾತನಾಡಿದರು. ಕ್ಯಾನ್ಸರ್‌ರನ್ನು ಕಡೆಗಣಿಸಬೇಡಿ ವೈದ್ಯರ ಬಳಿಗೆ ಹೋಗಿ ಚಿಕಿತ್ಸೆ ಪಡೆದರೆ ಖಂಡಿತ ಹುಣಮುಖವಾಗುತ್ತದೆ ಎಂದು ತೀಳಿಸಿದರು. ಕ್ಯಾನ್ಸರ್ ಎಂಬುವ ಪಿಡುಗು ಅಲ್ಲ ಇದು ಹುಣ ಪಡಿಸುವಹುದಾದ ರೋಗವಾಗಿದ್ದು ಬೇಗನೆ ಪತ್ತೆಹಚ್ಚುವುದರಿಣದ ಮೊದಲ ಗಂತದಲ್ಲಿಯೆ ಕ್ಯಾನ್ಸರ್ ಸಂಪೂರ್ಣ ಗುಣಪಡಿಸಬಹುದು ಹಾಗೂ ಕೊನೆಯ ಹಂತದ ರೋಗಿಗಳಿಗೆ ನೂತನ ವಿವಿಧ ಚಿಕಿತ್ಸೆಯಿಣದ ಹತೋಟಿಗೆ ತರಬಹುದು ಎಂದು ತೀಳಿಸಿದರು. ಈ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಯ ನಿರ್ದೇಶಕ ಫಾದರ್ ವಿಕ್ಟರ್ ವಾಸ್, ಸಿ.ಪಿ.ಐ ವಿನೋದ್ ಕುಮಾರ್, ಪಿ.ಎಸ್.ಐ ವಾಸಿಮ್ ಪಟೇಲ್, ಸಿ.ಪಿ.ಐ ರಘುವೀರಸಿಂಗ್ ಠಾಕೂರ್, ಸಿದ್ದಲಿಂಗ್, ಸರ್ಕಾರಿ ಶಾಲೆಯ ಶಿಕ್ಷಕರು ಅಮರ್ ಮತ್ತು ಅನಿಲ್ ಕುಮಾರ್ ಸನ್ನೀ, ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಹಾಗೂ ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ಡಾನ್ ಬಾಸ್ಕೋ ಸಿಬ್ಬಂಧಿ ವರ್ಗದವರು ಉಪಸ್ಥಿತರಿದ್ದರು. ಔರಾದ್ ತಾಲೂಕಿನಲ್ಲಿ ಕ್ಯಾನ್ಸರ್‌ನ ಕರಪತ್ರವನ್ನು ನೀಡಿ ದೇಣಿಗೆಯನ್ನು ಸಂಗ್ರಹಿಸಲಾಯಿತು. ಹಾಗೂ ಈ ಜಾಗೃತಿ ಜಾಥಾ ಕಾರ್ಯಕ್ರಮವು ತಾಂತ್ರಿಕವಾಗಿ ಹಾಗೂ ಮಾನಸಿಕವಾಗಿ, ಸಾಮಾಜಿಕ ಪ್ರತಿಕ್ರಿಯೆಯನ್ನು ಉತ್ತಮಗೊಳಿಸಲು ಬಹುಯೋಗ್ಯವಾಗಿದೆ ಎಂದು ಪಟ್ಟಣದ ಜನರು ಬಹು ಸಂತೋಷ ಪಟ್ಟು ದೇಣಿಗೆಯನ್ನು ನೀಡಿದರು.



ಪೂಜ್ಯ ರಾಬರ್ಟ್ ಮಿರಾಂದಾ
ಗುಲಬರ್ಗಾ ಧರ್ಮಾಧ್ಯಕ್ಷರು

ವಂ. ಫಾ॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ, ಕಲಬುರಗಿ













orbit humnabad
Orbit Bidar
@orbitbidar330
www.orbitbidar.in
+91 8660968063
+91 8971119914
Orbitbidar93@gmail.com

# “ನವಜೀವನ (ಎ.ಪಿ.ಎಫ್) ಕಾರ್ಯಕ್ರಮ”

## “ಎರಡು ದಿನದ ಕ್ಷೇತ್ರ ಆಧಾರಿತ ತರಬೇತಿ ಕಾರ್ಯಗಾರ”



ಫೆಬ್ರುವರಿ ತಿಂಗಳ 13 14 ರಂದು ಹುಮ್ನಾಬಾದ್ ಪಟ್ಟಣ ಹಾಗೂ ಚಿಟ್ಟಗುಪ್ಪ ತಾಲೂಕಿನ ತಾಳ್ಮಡಗಿ, ಮಂಗಲಗಿ ಗ್ರಾಮಗಳಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಟ್ರೈಮ್‌ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಎರಡು ದಿನದ ಕ್ಷೇತ್ರ ಆಧಾರಿತ ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸಂತೋಷ್ ಎಪಿಡಿ ರವರು ನವ ಜೀವನ ಕಾರ್ಯಕ್ರಮದ ಸಿಬ್ಬಂದಿ ವರ್ಗದವರಿಗೆ ಫಲಾನುಭವಿಗಳಿಗೆ ಯಾವ ವಿಷಯದ ಕುರಿತು ಅಗತ್ಯವಿದೆ ಹಾಗೂ ಅವರು ಯಾವ ಸಮಸ್ಯೆಯಲ್ಲಿ ಸಿಲುಕಿದ್ದಾರೆ ಎಂದು ಗುರುತಿಸಿ ಅದರ ಮೇಲೆ ಕಾರ್ಯನಿರ್ವಹಿಸುವುದರಿಂದ ಕಾರ್ಯಕ್ರಮವು ಸಫಲವಾಗಿ ಯಶಸ್ವಿಗೊಳ್ಳುತ್ತದೆ, ಹಾಗೂ ಅವರನ್ನು ಸ್ವಯಂಸೇವಕರನ್ನಾಗಿ ಮಾರ್ಪಡಿಸಲು ಬೇಕಾದ ಮಾರ್ಗದರ್ಶನವನ್ನು ನೀಡಿ ಕಾರ್ಯಕ್ರಮವನ್ನು ಸಮುದಾಯಕ್ಕೆ ಹಸ್ತಾಂತರಿಸಲು ಸಹಾಯಕವಾಗುತ್ತದೆ ಎಂದು ಮಾರ್ಗದರ್ಶನವನ್ನು ನೀಡಲಾಯಿತು. ಹಾಗೂ ಪ್ರತಿ ಕಾರ್ಯಕರ್ತರು ತಮ್ಮ ತಮ್ಮ ಫಲಾನುಭವಿಗಳನ್ನು ವಿಕಲಚೇತನರ ಗುಂಪುಗಳ ಸಭೆಗಳಲ್ಲಿ ಭಾಗವಹಿಸುವ ಹಾಗೆ ನೋಡಿಕೊಳ್ಳುವುದೆಂದು ಮಾರ್ಗದರ್ಶನವನ್ನು ನೀಡಿದರು.

## “ಮಾನಸಿಕ ಕಾಯಿಲೆ ಕುರಿತು ಜಾಗ್ರತಿ ಕಾರ್ಯಕ್ರಮ”



ದಿನಾಂಕ 03/02/2025ರಂದು ಹುಮ್ನಾಬಾದ್ ತಾಲೂಕಿನ ಮೋಳಕೆರ ಗ್ರಾಮದ ಅಂಗನವಾಡಿಯಲ್ಲಿ ಅಜೀಮ್ ಪ್ರೇಮ್‌ಜಿ ಫೌಂಡೇಷನ ಸಂಯುಕ್ತ ಆಶ್ರಯದ ಆರ್ಬಿಟ್ ಸಂಸ್ಥಯ ನವಜೀವನ ಕಾರ್ಯಕ್ರಮದ ಕಾರ್ಯಕತೆಯಾದ ಶ್ರೀಮತಿ ಮಹಾದೇವಿ ಭಾಗವಹಿಸಿದ್ದರು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿ ಶ್ರೀ ಮನೋಜ್ ಕುಮಾರ HIO ಇವರು ಭಾಗವಹಿಸಿದ್ದರು. ಇವರು ಮಾನಸಿಕ ಕಾಯಿಲೆ ಒಂದು ಮೆದುಳಿನ ಕಾಯಿಲೆ ಯಾಗಿದೆ ಮತ್ತು ಅದರ ಲಕ್ಷಣಗಳ ಬಗ್ಗೆ ಮಾಹಿತಿ ತಿಳಿಸಿದರು. ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಯ ಲಕ್ಷಣಗಳು, ಕಾರಣ ಇಲ್ಲದೆ ಅಳೋದು, ಕಾರಣ ಇಲ್ಲದೆ ನಗುವುದು, ದಾರಿಯಲ್ಲಿ ಹೋಗುವವರನ್ನು ಕಂಡು ಬಯ್ಯೋದು, ಹೇಳಿದ್ದೇ ಪದೇ ಪದೇ ಕೈ ತೊಳೆಯುವುದು, ಪದೇ ಪದೇ ನೀರು ಚೆಲ್ಲೋದು, ಏಕಾಂಗಿ ಆಗಿರೋದು ಹೀಗೆ ಅವರ, ಲಕ್ಷಣಗಳು ಇರುತ್ತವೆ. ಇಂತವರು ಕಂಡು ಬಂದಲ್ಲಿ ನೀವು ಹುಮ್ನಾಬಾದ್ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತಿ ಬುಧವಾರ ವೈದ್ಯರು ಬರುತ್ತಾರೆ ಅವರನ್ನು ವೈದ್ಯರ ಬಳಿ ತಪಾಸಣೆ ಮಾಡಿಸಿ ಅವರಿಗೆ ಉಚಿತ ಔಷಧಿಯನ್ನು ಕೊಡಿಸಿರಿ. ಬೆಳಗ್ಗೆ ಗಂಟೆಯಿಂದ 10 ಗಂಟೆಯಿಂದ ಮಧ್ಯಾನ 1:00 ಗಂಟೆಯ ವರೆಗೆ ಇರುತ್ತಾರೆ ಹೆಚ್ಚಿನ ಮಾಹಿತಿಗಾಗಿ ಈ ನಂಬರ ಕರೆ ಮಾಡಿ 9036664271 ಎಂದು ತಿಳಿಸಲಾಯಿತು.

## “ಮಕ್ಕಳಿಗೆ ಮಾನಸಿಕ ಆರೋಗ್ಯದ ಅರಿವು ಮೂಡಿಸುವ ಕಾರ್ಯಕ್ರಮ”



ದಿನಾಂಕ 03/02/2025 ರಂದು ಹುಮ್ನಾಬಾದ್ ನಗರದ ನಗರೇಶ್ವರ ಪ್ರೌಢಶಾಲೆಯ ಮಕ್ಕಳಿಗೆ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಹಯೋಗದೊಂದಿಗೆ ಮಕ್ಕಳಿಗೆ ಮಾನಸಿಕ ಆರೋಗ್ಯದ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಅರುಣಕುಮಾರ ಕೋಟೆ ಕಾಯಿಲೆಯ ಲಕ್ಷಣಗಳು ಚಿಕಿಸ್ಥೆಯ ಕುರಿತು ಮತ್ತು ಆಪ್ತ ಸಮಾಲೋಚನೆಯ ಬಗ್ಗೆ ವಿವರಿಸಿದರು. ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಕಂಠಿ ಅವರು ಹಾಗೂ ಶಾಲೆಯ ಶಿಕ್ಷಕರು ಹಾಗೂ 33 ಮಕ್ಕಳು ಉಪಸ್ಥಿತರಿದ್ದರು.

## “ಮಾನಸಿಕ ಆರೋಗ್ಯದ ಕುರಿತು ಜಾಗ್ರತಿ ಕಾರ್ಯಕ್ರಮ”



ಫೆಬ್ರವರಿ 25ರಂದು ಚೀಟುಗುಪ್ಪ ತಾಲೂಕಿನ ಮಂಗಲಗಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಮಕ್ಕಳಿಗೆ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್ ಕುಮಾರ್ ಅವರು ಮಕ್ಕಳಿಗೆ ಮಾಹಿತಿ ನೀಡುತ್ತಾ ಆರೋಗ್ಯ ಹಾಗು ಮಾನಸಿಕ ಆರೋಗ್ಯ ಎಂದರೇನು ಮತ್ತು ಮಾನಸಿಕ ಕಾಯಿಲೆ ಎಂದರೇನು, ಮಾನಸಿಕ ಕಾಯಿಲೆಯು ಹೇಗೆ ಬರುತ್ತದೆ ಮತ್ತು ಈ ಕಾಯಿಲೆ ಬಂದಾಗ ಮೂಢನಂಬಿಕೆಗೆ ಬಲಿಯಾಗದೆ ಇದು ಒಂದು ಮೆದುಳಿನ ಕಾಯಿಲೆಯಾಗಿದೆ ಎಂದು ತಿಳಿದುಕೊಂಡು ಸೂಕ್ತ ವೈದ್ಯರ ಸಲಹೆ ಪಡೆದು ಇತರ ರೋಗಗಳಂತೆ ಗುಣ ಪಡಿಸಬಹುದೆಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 40 ಮಕ್ಕಳು ಮತ್ತು ಶಾಲಾ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

## “ಸೀಮೆನಾಗಣ್ಣ ವಿಶೇಷ ವಿಕಲಚೇತನರ ಸಂಘದ ಸಭೆ”



ದಿನಾಂಕ 19/02/2025 ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ್ (ಬಿ) ಪಟ್ಟಣದಲಿ ನಾಲ್ಕು ಫಲಾನುಭವಿಗಳ ಮನೆ ಭೇಟಿ ಮಾಡಿ, ನಂತರ ಸೀಮೆ ನಾಗಣ್ಣ ವಿಶೇಷ ವಿಕಲಚೇತನರ ಸಂಘದ ಸಭೆ ಏರ್ಪಡಿಸಲಾಯಿತು, ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ದೇವಿಡ್ ಅವರು ಸೇರಿ ಬಂದ ಸಂಘದ ಸದಸ್ಯರಿಗೆ, ಸಂಘದ ಸಭೆಯನ್ನು ಸೇರಲು ಒಂದು ನಿಗದಿತವಾದ ದಿನಾಂಕವನ್ನು ಸೂಚಿಸುವಂತೆ ತಿಳಿಸಿದರು, ಹಾಗೂ ಸಂಘದ ಸದಸ್ಯರಲ್ಲಿ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳನ್ನು ಆಯ್ಕೆ ಮಾಡಿ ತಮಗದ ಸಮಸ್ಯೆಗಳ ಬಗ್ಗೆ ಕುರಿತು ಚರ್ಚಿಸಿ ಪರಿಹಾರವನ್ನು ಕಂಡುಕೊಳ್ಳಲು ಮಾಹಿತಿಯನ್ನು ನೀಡಿದರು. ಈ ಸಭೆಯಲ್ಲಿ ಒಟ್ಟು ನಾಲ್ಕು ಜನ ಸದಸ್ಯರು ಭಾಗವಹಿಸಿದ್ದರು.

## “ಎರಡು ತಿಂಗಳ ಕೌಶಲ್ಯ ಅಭಿವೃದ್ಧಿ ತರಬೇತಿ ಬಾಲಯೇಸು ಪುಣ್ಯಕ್ಷೇತ್ರ ಭಾಲ್ಕಿ”



ದಿನಾಂಕ 16.2025 ಭಾನುವಾರದಂದು ಅರ್ಚ ಡಾಯೋಸಿಸ್ ಕಾರಿತಾಸ ಮತ್ತು ಆರ್ಬಿಟ್ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ ಉದ್ಘಾಟನೆಯ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಫಲಾನುಭವಿಗಳಿಗೆ ಪೇಪರ್ ಬ್ಯಾಗ್ ತಯಾರಿಕೆ, ಬಟ್ಟೆ ತಯಾರಿಕೆ, ವಾಹನ ಚಾಲನೆ, ಕಂಪ್ಯೂಟರ್ ತರಬೇತಿಗಳು ನಡೆಯುತ್ತಿದೆ. ಈ ಉದ್ಘಾಟನೆ ಕಾರ್ಯಕ್ರಮದಲ್ಲಿ ವಂ. ಫಾದರ್ ಜಾನ್ ಕ್ರೈಸ್ಟ್, ಫಾದರ್ ಜಾರ್ಜ್ ನೆಗ್ನಿಸ್, ವಂ. ಫಾದರ್ ವಿಜಯ್ ಕುಮಾರ್, ಸಹಾಯಕ ನಿರ್ದೇಶಕರು ಆರ್ಬಿಟ್ ಸಂಸ್ಥೆ ಮತ್ತು ಸಿಸ್ಟರ್ ಕ್ರಿಸ್ಟಿನ್ ಸಂಪನ್ಮೂಲ ವ್ಯಕ್ತಿಗಳು ಫಾದರ್ ರೇಜಿ, ಮೇಡಂ ಸ್ವರೂಪ, ಮೇಡಂ ಶಾರದಾ, ಹಾಗೂ ಎಲ್ಲಾ ಫಲಾನುಭವಿಗಳು ಮತ್ತು ಪೋಷಕರು ಉಪಸ್ಥಿತರಿದ್ದರು.

## “ಕೇಂದ್ರ ಆಧರಿತವಾಗಿ ಆಪ್ತ ಸಮಾಲೋಚನೆ ಕಾರ್ಯಕ್ರಮ”



ದಿನಾಂಕ 17/2/2025ರಂದು ಘಾಟ್‌ಬೋರಳ ಗ್ರಾಮದಲ್ಲಿ ಕೇಂದ್ರ ಆಧರಿತವಾಗಿ ಆಪ್ತಸಮಾಲೋಚನೆ ಕಾರ್ಯಕ್ರಮವನ್ನು ನವಜೀವನ ಕಾರ್ಯಕ್ರಮದ ಅಡಿಯಲ್ಲಿ ಅಂಗನವಾಡಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಫಲಾನುಭವಿಗಳಿಗೆ ಪ್ರತಿಯೊಂದು ಮನೆಮನೆಗಳಿಗೆ ಹೋಗಿ ಅವರ ಸ್ಥಿತಿಗತಿ ಹಾಗೂ ಕಷ್ಟಸುಖಗಳ ಮತ್ತು ಕುಟುಂಬದಲ್ಲಿರುವ ಹೊಂದಾಣಿಕೆ ಮತ್ತು ಸಮುದಾಯಗಳ ಚಟುವಟಿಕೆಯಲ್ಲಿ, ಸಭೆ ಸಂಭ್ರಮಗಳಲ್ಲಿ ಭಾಗವಹಿಸುವಿಕೆ ಹಾಗೂ ಆಪ್ತ ಸಮಾಲೋಚನೆಯಿಂದ ಹೊರಬರಲಿಕ್ಕೆ ಸಾಧ್ಯವಾಗುವ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಾ, ಆಪ್ತ ಸಮಾಲೋಚನೆಯನ್ನು ಸದ್ಯದಲ್ಲಿ ಕೇಂದ್ರ ಆಧರಿತವಾಗಿ ಆಪ್ತಸಮಾಲೋಚನೆ ಮಾಡಲಾಗುತ್ತಿದೆ. ಈ ಆಪ್ತಸಮಾಲೋಚನೆಯಲ್ಲಿ ಅವರು ಮನೆಯಿಂದ ಹೊರಗಡೆ ಬರದೇ ಇರುವುದು ಒಂದು ದೊಡ್ಡ ಪ್ರಶ್ನೆಯಾಗಿದೆ? ಸದ್ಯದ ಸ್ಥಿತಿಯಲ್ಲಿ ಮನೆಯಿಂದ ಸಮುದಾಯ ಅಥವಾ ಅಂಗನವಾಡಿ ಕೇಂದ್ರಗಳಲ್ಲಿ ಭೇಟಿ ನೀಡುವುದು ಹಾಗೂ ಜನರ ಸಂಪರ್ಕ ಪಡೆಯಲು ಒಂದು ಸುವರ್ಣಾವಕಾಶವಾಗಿದೆ ಎಂದು ಫಲಾನುಭವಿಗಳು ವ್ಯಕ್ತಪಡಿಸಿರುತ್ತಾರೆ. ಯಾವುದೇ ವಿಷಯಗಳನ್ನು ಸಂಕೋಚವಿಲ್ಲದೆ ವ್ಯಕ್ತಪಡಿಸುತ್ತಾ ಆಪ್ತಸಮಾಲೋಚನೆಯಲ್ಲಿ ಒಳಪಡಿತಾ ಇದ್ದಾರೆ. ಆಪ್ತಸಮಲೋಚನೆಯೊಂದಿಗೆ ಒಳಪಡಿಸಿ ಅರ್ಥವಾಗದ ವಿಷಯಗಳನ್ನು ಮಾರ್ಗದರ್ಶನ ಮೂಲಕ ಮಾಹಿತಿಗಳು ನೀಡುತ್ತಿರುತ್ತಾರೆ. ಇದರಿಂದ ಸಂತೋಷದಿಂದ ಫಲಾನುಭವಿಗಳು ಇದರ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಆರ್ಬಿಟ್ ಸಂಸ್ಥೆಯ ನಿರ್ದೇಶಕರಿಗೂ, ಸಂಸ್ಥೆಯ ಕಾರ್ಯಕರ್ತರಿಗೂ ಧನ್ಯವಾದಗಳು ಸಲ್ಲಿಸುತ್ತಿದ್ದಾರೆ.

## “ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ”



ದಿನಾಂಕ 17/02/2024ರಂದು ಹುಮನಾಬಾದ್ ತಾಲೂಕಿನ ಘಾಟ್‌ಬೋರಳ ಗ್ರಾಮದ ಹಿರಿಯ ನಾಗರಿಕರಿಗೆ ಆರ್ಬಿಟ್ ಸಂಸ್ಥೆ ಹುಮನಾಬಾದ್ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯದ ಶ್ರೀಮತಿ ಪೂಜಾ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡುತ್ತಾ. ಮಾನಸಿಕ ಎಂದರೇನು. ಮಾನಸಿಕ ಕಾಯಿಲೆ ಎಂದರೇನು, ಅದರ ಲಕ್ಷಣಗಳ ಕುರಿತು ಮಾಹಿತಿ ನೀಡುತ್ತಾ, ಮಾನಸಿಕ ಕಾಯಿಲೆ ಬಂದರೆ ಭಯಪಡುವ ಅವಶ್ಯಕತೆ ಇಲ್ಲ ಯಾಕೆಂದರೆ ಇತರ ಕಾಯಿಲೆಗಳಂತೆ ಇದು ಕೂಡ ಒಂದು ಮೆದುಳಿನ ಕಾಯಿಲೆಯಾಗಿದೆ. ಇದಕ್ಕೆ ಸೂಕ್ತ ಚಿಕಿತ್ಸೆ ಕೊಡಿಸುವುದರ ಮೂಲಕ ಕಾಯಿಲೆ ಗುಣಪಡಿಸಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 12 ಜನ ಓಣಿಯ ಹಿರಿಯ ನಾಗರಿಕರು ಮತ್ತು ಮಹಿಳೆಯರು ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು.

## “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”

### “ಬೆಳವಣಿಗೆಯಲ್ಲಿ ಕುಂಟಿತ ಮಕ್ಕಳಿಗೆ ಮನೆ ಆಧಾರಿತ ಚಟುವಟಿಕೆ”



ಫೆಬ್ರವರಿ 12 /2025 ರಂದು ಹುಮ್ನಾಬಾದ್ ತಾಲೂಕಿನ ಹೊರವಲಯದ ಆರ್ಬಿಟ್ ಸಂಸ್ಥೆ ಹಾಗೂ APD ಸಂಸ್ಥೆ ಬೆಂಗಳೂರು, ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ APD ಸಂಸ್ಥೆಯ ಫಿಜೊ ಥೆರೇಫಿಸ್ಟ್ ಆಗಿರತಕ್ಕಂತ ಶ್ರೀ ಧನಂಜಯ್ ಸರ್ ರವರು, ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಸದಾನಂದ ಜೊತೆಸೇರಿ ಮೂರು ಗ್ರಾಮಗಳ ಭೇಟಿ ಮಾಡಿ ನಾಲ್ಕು ಮಕ್ಕಳ ಪೋಷಕರ ಅನುಮತಿ ಪಡೆದುಕೊಂಡು ಮಕ್ಕಳ ವಿಕಲತೆಯನ್ನು ಕಂಡುಹಿಡಿದು ಮಕ್ಕಳಿಗೆ ಮನೆ ಆಧಾರಿತ ಚಟುವಟಿಕೆ ಸಪೋರ್ಟ್ ಇಂದ ಕೂರಿಸುವ, ಒರೋ ಮೋಟರ್, ಬಲೂನ್ ಉದುವುದು, ಬಣ್ಣ ಬಣ್ಣದ ಲೈಟ್ ಉಪಯೋಗಿಸಿ, ಗುರುತಿಸುವಂತಹ, ಶಬ್ದ ಗುರುತಿಸುವ ಚಟುವಟಿಕೆ ಮಾಡಿಸಲಾಯಿತು. ದಿನಾಂಕ 14/02/2025 ರಂದು ಪೋಷಕರಿಗೆ ಆರ್ಬಿಟ್ ಸಂಸ್ಥೆಯಲ್ಲಿ ಪೋಷಕರ ಬಲವರ್ಧನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ತಾವು ಅದರಲ್ಲಿ ಭಾಗವಹಿಸಿ ಮಾಹಿತಿ ಪಡೆದು ಕೊಂಡು ಮಕ್ಕಳ ವಿಕಲತೆಯನ್ನು ಕಡಿಮೆಗೊಳಿಸುವಂತಹ ಕೆಲಸ ನೀವು ಮಾಡಬಹುದು ಎಂದು ಪೋಷಕರಿಗೆ ಮಾಹಿತಿ ತಿಳಿಸಿದರು. ಹಳ್ಳಿಗಳ ಬೇಟಿಗಳಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ಮೂರು ಜನ ಭಾಗವಹಿಸಲಾಯಿತು.



## “ಮೆಜರ್ಮೆಂಟ್ ಕ್ಯಾಂಪ್ ಮತ್ತು ಪೋಷಕರ ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮ”



ಫೆಬ್ರವರಿ 14 2025ರಂದು ಹಮ್ನಾಬಾದ್ ಹೊರವಲಯದ ಆರ್ಬಿಟ್ ಸಂಸ್ಥೆಯಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ಮೆಜರ್ಮೆಂಟ್ ಕ್ಯಾಂಪ್ ಮತ್ತು ಪೋಷಕರ ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮ ನಡಿಸಲಾಯಿತು. ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ವಿಜಯಕುಮಾರ್ ರವರು ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳ ಪೋಷಕರನ್ನು ಮಕ್ಕಳನ್ನು ಹೇಗೆ ಸಂರಕ್ಷಣೆ ಮಾಡಬೇಕು ಮತ್ತು ಅವರ ಪಾಲನೆ ಪೋಷಣೆ ಹೇಗೆ ಮಾಡಬೇಕು ಎನ್ನುವುದರ ಕುರಿತು ಮಾಹಿತಿಯನ್ನು ನೀಡಿದರು. Apd ಸಂಸ್ಥೆಯಿಂದ ಶ್ರೀ ಧನಂಜಯ ಸರ್ ಅವರು ಮಕ್ಕಳಿಗೆ ಮೌಲ್ಯಮಾಪನ ಮತ್ತು ದಹಿಕ ಮಾಪನ ಮಾಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 38 ಪೋಷಕರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು. ನಿರೂಪಣೆ ಸೂರ್ಯಕಾಂತ್, ಸ್ವಾಗತ ಸದಾನಂದ್, ವಂದನಾರ್ಪಣೆ ಮಮತಾ.

## “ಬೆಳವಣಿಗೆಯಲ್ಲಿ ಕುಂಟಿತ ಮಕ್ಕಳಿಗೆ ದೈಹಿಕ ಮೌಲ್ಯಮಾಪನ”



ಫೆಬ್ರವರಿ 25 2025ರಂದು ಹುಮನಾಬಾದ್ ತಾಲೂಕಿನ ಹಂದಿಕೆರೆ ಗ್ರಾಮದಲ್ಲಿ ಮೂರು ಅಂಗನವಾಡಿಗಳಿಗೆ ಭೇಟಿ ನೀಡಿ ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳ ಗುರುತಿಸುವಗೋಸ್ಕರ ಮಕ್ಕಳಿಗೆ ದೈಹಿಕ ಮೌಲ್ಯಮಾಪನ ಮಾಡಲಾಯಿತು. ಮಕ್ಕಳ ಎತ್ತರ ಎದೆ ಸುತ್ತಳತೆ ತೂಕ ಹಾಗೂ ತೋಳಿನ ಸುತ್ತಳತೆ ಹಾಗೂ ತಲೆಯ ಸುತ್ತಳತೆಗಳನ್ನು ಮಾಡಲಾಯಿತು. ದೈಹಿಕ ಮೌಲ್ಯಮಾಪನ ಮಾಡುವ ಮೂಲ ಉದ್ದೇಶವೇನೆಂದರೆ ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳು ವಯಸ್ಸಿಗೆ ತಕ್ಕಂತೆ ಎತ್ತರ ಇರುವುದಿಲ್ಲ ಹಾಗೂ ತಲೆ ದಪ್ಪದಾಗಿರಬಹುದು ಅಥವಾ ಚಿಕ್ಕದಾಗಿರಬಹುದು. ತಲೆ ದಪ್ಪಗೆ ಇದ್ದರೆ ಹೈಡ್ರೋಸೆಫಿಲ್ ಎಂದು ಕರೆಯುತ್ತಾರೆ. ತಲೆ ಚಿಕ್ಕದಾಗಿ ಇದ್ದರೆ ಮೈಕ್ರೋಸಾಫ್ಲಿನೆ ಎಂದು ಕರೆಯುತ್ತಾರೆ. ಜೊತೆಗೆ ಮಗು ಬೆಳೆದೇ ಇರತಕ್ಕಂತ ಸಂದರ್ಭದಲ್ಲಿ ಅದನ್ನು ಡಾರ್ ಫಿಸಂ ಎಂದು ಕರೆಯುತ್ತಾರೆ ಎಂದು ವಿವಿಧ ಲಕ್ಷಣಗಳ ಕುರಿತು ಅಂಗನವಾಡಿ ಶಿಕ್ಷಕರಿಗೆ ಮಾಹಿತಿಯನ್ನು ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಸುಮಾರು 40 ಮಕ್ಕಳಿಗೆ ದಹಿಕ ಮೌಲ್ಯಮಾಪನಕ್ಕೆ ಒಳಪಡಿಸಲಾಯಿತು. ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳಿಗೆ ನಮ್ಮ ಸಂಸ್ಥೆ ಮುಖಾಂತರ ಪೌಷ್ಟಿಕ ಆಹಾರವನ್ನು ನೀಡಲಾಗುವುದು ಜೊತೆಗೆ ಕುಂಠಿತ ಹೊಂದಿರುವ ಮಕ್ಕಳಿಗೆ ಸಾಧನ ಸಲಕರಣೆಗಳು ಕೂಡ ನೀಡಬಹುದು ಹಾಗೂ ಸರ್ಕಾರದಿಂದ ಸಿಗುವಂತಹ ಸೌಲಭ್ಯವನ್ನು ಒದಗಿಸಿಕೊಡುವಂತ ಕೆಲಸ ಕಾರ್ಯಗಳನ್ನು ನಮ್ಮ ಆರ್ಬಿಟ್ ಸಂಸ್ಥೆ ನಿರ್ವಹಿಸುತ್ತದೆ ಎಂದು ಮಾಹಿತಿ ನೀಡಲಾಯಿತು.



## “ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ”

## “ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾನಸಿಕ ಅಸ್ವಸ್ಥತೆಯ ಬಗ್ಗೆ ಜಾಗೃತಿ”



ದಿನಾಂಕ 25/02/2025ರಂದು ಬೀದರ್ ತಾಲೂಕಿನ ನಂದಗಾಂವ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಅರುಣ್ ರವರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾನಸಿಕ ಅಸ್ವಸ್ಥತೆಯ ಬಗ್ಗೆ ಜಾಗೃತಿ ಮೂಡಿಸಲಾಯಿತು. ಅದರಲ್ಲಿ ಮಾನಸಿಕ ಅಸ್ವಸ್ಥತೆ ಎಂದರೇನು? ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು, ಮತ್ತು ಮಾನಸಿಕ ಕಾಯಿಲೆಯುಳ್ಳವರನ್ನು ಯಾವ ರೀತಿ ಪತ್ತೆಹಚ್ಚಬೇಕು? ಎಂಬುದಾಗಿ ತಿಳಿಸಲಾಯಿತು. ಈ ರೋಗ ಒಂದು ಮೆದುಳಿನ ಕಾಯಿಲೆಯಾಗಿದೆ, ಇದು ಕೇವಲ ಬಡವರಿಗೆ ಮಾತ್ರವಲ್ಲದೆ ಚಿಕ್ಕವರಿಂದ ದೊಡ್ಡವರವರೆಗೂ ಯಾರಿಗೂ ಬರಬಹುದು. ನಾವು ಈ ಒಂದು ಸಮಸ್ಯೆಯಲ್ಲಿ ಒಳಗಾಗದೆ ನಾವು ಪರಿಸರಕ್ಕೆ  ಅನುಗುಣವಾಗಿ ಹೊಂದಿಕೊಂಡು ಯಾವುದೇ ಒಂದು ವಿಷಯದಲ್ಲಿ ಮುಳುಗಿ ಹೋಗದ ಹಾಗೆ ನಮ್ಮ ಆರೋಗ್ಯದ ಕಡೆ ಗಮನ ಕೊಡಬೇಕು ಎಂದು ಎಚ್ಚರಿಸಿದರು. ಪತ್ತೆ ಹಚ್ಚಿದ ಮಾನಸಿಕ ಅಸ್ವಸ್ಥರನ್ನು ಮೂಢನಂಬಿಕೆಗೆ ಒಳಗಾಗದೆ ಆದಷ್ಟು ಬೇಗ ಚಿಕಿತ್ಸೆಗೆ ಒಳಪಡಿಸಬೇಕೆಂದು ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು. ಮತ್ತು ಮಾನಸಿಕ ಅಸ್ವಸ್ಥರಾಗಿದ್ದು ಬದಲಾವಣೆ ಆದ ಫಲಾನುಭವಿಯ ವೀಡಿಯೊಗಳನ್ನು ತೋರಿಸಿ ನಂಬಿಕೆ ಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ 25 ಜನ ಮಕ್ಕಳು ಒಬ್ಬ ಶಿಕ್ಷಕರಿದ್ದು ಒಟ್ಟು 26 ಜನ ಭಾಗವಹಿಸಿದ್ದರು.

## “ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಶಾ ಕಾರ್ಯಕರ್ತೆಯರಿಗೆ, ಮಾನಸಿಕ ಆರೋಗ್ಯದ ಕುರಿತು ತರಬೇತಿ”




ದಿನಾಂಕ 24-02-2025ರಂದು ಬೀದರ್ ತಾಲೂಕಿನ ಯರನಳ್ಳಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ, ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಕಾರ್ಯಕ್ರಮದ ಎಲ್.ಎಲ್.ಎಲ್.ಎಫ್ ಸಂಯುಕ್ತ ಆಶ್ರಯದಲ್ಲಿ ಆರ್ಬಿಟ್ ಸಂಸ್ಥೆಯ ಸಂಪನ್ಮೂಲ ವ್ಯಕ್ತಿ ಶ್ರೀ ಆನಂದ ಅವರು ಆಶಾ ಕಾರ್ಯಕರ್ತೆಯರಿಗೆ, ಮಾನಸಿಕ ಆರೋಗ್ಯದ ಕುರಿತು ತರಬೇತಿ ನೀಡಿದರು, ಆರೋಗ್ಯ ಎಂದರೇನು? ಮಾನಸಿಕ ಆರೋಗ್ಯ. ಮಾನಸಿಕ ಕಾಯಿಲೆ. ಕಾಯಿಲೆಯ ಲಕ್ಷಣಗಳು ಮತ್ತು ಚಿಕಿತ್ಸೆಯ ಕುರಿತು ಸಂಪೂರ್ಣವಾಗಿ ತರಬೇತಿ ನೀಡಿದರು. ಮಾನಸಿಕ ಆರೋಗ್ಯ ತರಬೇತಿಯ ಪ್ರಮುಖ ಅಂಶಗಳು ಆಶಾ ಕಾರ್ಯಕರ್ತರು ಮಾನಸಿಕ ಅಸ್ವಸ್ಥರಿಗೆ ಮಾನಸಿಕ ಆರೋಗ್ಯ ಸೇವೆಗಳನ್ನು ಹೇಗೆ ನೀಡಬೇಕು. ಆಶಾ ಕಾರ್ಯಕರ್ತರು ಮಾನಸಿಕ ಆರೋಗ್ಯ ಕಾರ್ಯಕ್ರಮಗಳಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಸುಲಭಗೊಳಿಸಲು ಸಹಾಯ ಮಾಡಬಹುದು.  ಆಶಾ ಕಾರ್ಯಕರ್ತರು ಮಾನಸಿಕ ಆರೋಗ್ಯ ರಕ್ಷಣೆಯಲ್ಲಿನ ಅಂತರವನ್ನು ಕಡಿಮೆ ಮಾಡಲು ಸಹಾಯ ಮಾಡಬಹುದು. ಸಾಮಾನ್ಯ ಮಾನಸಿಕ ಆರೋಗ್ಯ ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳುವುದು, ಎಚ್ಚರಿಕೆ ಚಿಹ್ನೆಗಳನ್ನು ಗುರುತಿಸುವುದು, ಮಾನಸಿಕ ಅಸ್ವಸ್ಥತೆಯ ಸುತ್ತಲಿನ ಕಳಂಕವನ್ನು ದೂರ ಮಾಡುವುದು, ಒತ್ತಡ ನಿರ್ವಹಣೆ ತಂತ್ರಗಳು, ಆತ್ಮಹತ್ಯೆ ತಡೆಗಟ್ಟುವಿಕೆ ಮಾಸಿಕ ಆರೋಗ್ಯದ ಅರಿವು ಪೋಷಕ ವಾತಾವರಣವನ್ನು ಸೃಷ್ಟಿಸುವುದು. ಈ ತರಬೇತಿಯಲ್ಲಿ ಒಟ್ಟು 20 ಆಶಾ ಕಾರ್ಯಕರ್ತರು ಭಾಗವಹಿಸಿದರು.

## “ಸಾರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಜಾಗೃತಿ”

ದಿನಾಂಕ 24/2/2025ರಂದು ಬೀದರ್ ತಾಲೂಕಿನ ನೆಲ್ವಾಡ್ ಗ್ರಾಮದ ಸಾರಕಾರಿ ಹಿರಿಯ ಪ್ರಾಥಮಿಕ ಶಾಲೆಯಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಎಲ್.ಎಲ್.ಎಲ್.ಎಫ್ ಸಂಯುಕ್ತಾಶ್ರಯದಲ್ಲಿ ಸಂಪನ್ಮೂಲ ವ್ಯಕ್ತಿಯಾದ ಅಭಿಷೇ ಮಕ್ಕಳಿಗೆ ಜಾಗೃತಿ ಮೂಡಿಸುತ್ತಾ ಮಾತನಾಡಿ, ದೈಹಿಕವಾಗಿ, ಮತ್ತು ಸಾಮಾಜಿಕವಾಗಿ, ಶಾರೀರಿಕವಾಗಿ, ಚೆನ್ನಾಗಿರೋದೇ ಪರಿಪೂರ್ಣ ಆರೋಗ್ಯ. ಮಾನಸಿಕ ಅಸ್ವಸ್ಥತೆ ಇದು ಒಂದು ಮೆದುಳಿನ ಕಾಯಿಲೆ, ಮೆದುಳಿನ ರಾಸಾಯನಿಕ ಕ್ರಿಯೆಯಲ್ಲಿ ಏರುಪೇರಾಗಿ ಮನುಷ್ಯನ ವರ್ತನೆಯಲ್ಲಿ ಬದಲಾವಣೆಯಾಗಿ ತನ್ನ ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಕು ಉಂಟಾಗುವದನ್ನು ಮಾನಸಿಕ ಅಸ್ವಸ್ಥತೆ ಎಂದು ಹೇಳುತ್ತೇವೆ. ಕಾಯಿಲೆಯ ಲಕ್ಷಣಗಳು ಭಯ ಆತಂಕ ಖಿನ್ನತೆ, ಇತ್ಯಾದಿ ಇಂತಹ ಲಕ್ಷಣಗಳಿದ್ದರೆ, ಮನೋವೈದ್ಯರ ಬಳಿ ಚಿಕಿತ್ಸೆ ನೀಡುವುದರ ಮೂಲಕ ಗುಣಪಡಿಸಬಹುದು. ಸಮುದಾಯದಲ್ಲಿ ಮಾನಸಿಕ ಅಸ್ವಸ್ಥರು ಕಂಡರೆ ಅವರನ್ನು ನಿರ್ಲಕ್ಷಿಸದೆ ಸಹಾಯ ಮಾಡುವ ಭಾವನೆ ನಿಮ್ಮದಾಗಬೇಕೆಂದು ಹೇಳಿದರು. ಈ ಜಾಗ್ರತಿ ಕಾರ್ಯಕ್ರಮದಲ್ಲಿ ಒಟ್ಟು 30 ವಿದ್ಯಾರ್ಥಿಗಳು ಹಾಗೂ 3 ಶಿಕ್ಷಕರು ಭಾಗವಹಿಸಿದರು.



## “ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮ”

ಫೆಬ್ರುವರಿ 24 2025ರಂದು ಬಸವಕಲ್ಯಾಣ ತಾಲೂಕಿನ ತಡೋಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೂ ಮತ್ತು ಶಿಕ್ಷಕರಿಗೂ ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಇವರ ಸಂಯುಕ್ತಾಶ್ರಯದಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು, ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಜಯಕುಮಾರ್ ಅವರು ಮಾತನಾಡಿ ಮಾನಸಿಕ ಆರೋಗ್ಯ ಈ ಕಾಯಿಲೆಗೆ ಕಾರಣ ಮತ್ತು ಲಕ್ಷಣಗಳು ಕುರಿತು ಮಾಹಿತಿ ನೀಡಿದರು, ಈ ಕಾಯಿಲೆಗೆ ಸರ್ಕಾರಿ ತಾಲೂಕ ಆಸ್ಪತ್ರೆಗಳಲ್ಲಿ, ಮನೋತಜ್ಞರಿಂದ ಉಚಿತವಾದ ತಪಾಸಣೆ ಮತ್ತು ಚಿಕಿತ್ಸೆಯ ಸೌಲಭ್ಯ ವ್ಯವಸ್ಥೆಯೂ ಇರುತ್ತದೆ. ಈ ರೋಗದ ಬಗ್ಗೆ ಹಳ್ಳಿ ಜನಗಳಲ್ಲಿ ಮೂಢನಂಬಿಕೆಯ ತಪ್ಪುಕಲ್ಪನೆಗಳು ಹೊಂದಿರುತ್ತಾರೆ. ವೈಜ್ಞಾನಿಕವಾದ ಚಿಕಿತ್ಸೆಗೆ ಸ್ಪಂದಿಸಿದ ಅನೇಕರು ಗುಣಮುಖರಾಗಿ ತಮ್ಮ ಹಿಂದಿನ ಕೆಲಸದಲ್ಲಿ ನಿರತರಾಗಿದ್ದಾರೆ, ಇಂತಹ ವ್ಯಕ್ತಿಗಳು ಕಂಡುಬಂದಲ್ಲಿ ಆರ್ಬಿಟ್ ಸಂಸ್ಥೆಯ ಸಹಾಯವಾಣಿ ಸಂಖ್ಯೆ 9036664271 ಕರೆ ಮಾಡಿ ಮಾಹಿತಿ ನೀಡಬಹುದು ಈ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು ಮತ್ತು ಶಿಕ್ಷಕರು ಸೇರಿ 28 ಜನರು ಭಾಗವಹಿಸಿದರು.



## “ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಗ್ರಾಮಸ್ಥರಿಗೆ ಮಾನಸಿಕ ಅಸ್ವಸ್ಥತೆ ಜಾಗೃತಿ”



ದಿನಾಂಕ 24.02.2025 ರಂದು ಕಮಲ್‌ನಗರ ತಾಲೂಕಿನ ತೋರಣ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಗ್ರಾಮಸ್ಥರನ್ನು ಲಿವ್.ಲವ್.ಲಾಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕುಮಾರಿ ಸಂಗೀತ ಗ್ರಾಮಸ್ಥರನ್ನು ಜಾಗೃತಿ ಮೂಡಿಸುತ್ತಾ. ಮಾತನಾಡಿ ದೈಹಿಕವಾಗಿ, ಮಾನಸಿಕವಾಗಿ, ಶಾರೀರಿಕವಾಗಿ ಮತ್ತು ಸಾಮಾಜಿಕವಾಗಿ ಚೆನ್ನಾಗಿರುವುದೇ ಪರಿಪೂರ್ಣ ಆರೋಗ್ಯ ಎಂದು ತಿಳಿಸಲಾಯಿತು. ಮಾನಸಿಕ ಅಸ್ವಸ್ಥತೆ ಎಂದರೆ ಇದು ಒಂದು ಮೆದುಳಿನ ಕಾಯಿಲೆ ಮೆದುಳಿನ ರಸಾಯನಿಕ ಕ್ರಿಯೆಯಲ್ಲಿ ಏರುಪೇರಾಗಿ ಮನುಷ್ಯನ ವರ್ತನೆಯಲ್ಲಿ ಬದಲಾವಣೆಯಾಗಿ ತನ್ನ ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಕು ಉಂಟಾಗುವುದನ್ನು ಮಾನಸಿಕ ಅಸ್ವಸ್ಥತೆ ಎಂದು ಹೇಳುತ್ತೇವೆ. ಕಾಯಿಲೆಯ ಲಕ್ಷಣಗಳು ಭಯ, ಆತಂಕ, ಖಿನ್ನತೆ ಇತ್ಯಾದಿ ಇಂತಹ ಲಕ್ಷಣಗಳಿದ್ದರೆ ಮನೋವೈದ್ಯರ ಬಳಿ ಚಿಕಿತ್ಸೆ ನೀಡುವುದರ ಮೂಲಕ ಗುಣಪಡಿಸಬಹುದು. ಸಮುದಾಯದಲ್ಲಿ ಮಾನಸಿಕ ಅಸ್ವಸ್ಥರನ್ನು ಕಂಡರೆ ಅವರನ್ನು ನಿರ್ಲಕ್ಷಿಸದೆ ಸಹಾಯ ಮಾಡುವ ಭಾವನೆ ನಿಮ್ಮದಾಗಬೇಕು ಎಂದು ತಿಳಿಸಿ ಹೇಳಲಾಯಿತು.

## “ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ”

ಫೆಬ್ರವರಿ 10 2025ರಂದು ಕಮಲನಗರ ತಾಲೂಕಿನ ಕೂರ್ಯಲ್ ಗ್ರಾಮದ ಗ್ರಾಮಸ್ಥರನ್ನು ಆರ್ಬಿಟ್ ಸಂಸ್ಥೆಯ ಮತ್ತು ಎಲ್.ಎಲ್.ಎಲ್.ಎಫ್ ಸಂಯುಕ್ತಾಶ್ರಯದಲ್ಲಿ ಮಾನಸಿಕ ಅಸ್ವಸ್ಥ ಜಾಗೃತಿ ಕಾರ್ಯಕ್ರಮವನ್ನು ಅಂಗನವಾಡಿಯಲ್ಲಿ ಮಾಡಲಾಯಿತು. ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಕುಮಾರಿ ಸಂಗೀತಾ ರವರು ಮಾತನಾಡುತ್ತಾ ಮಾನಸಿಕ ರೋಗ ಹೇಗೆ ಬರುತ್ತದೆ ಎಂದರೆ ಒಬ್ಬ ವ್ಯಕ್ತಿಯ ಜೀವನದಲ್ಲಿ ನಡೆದಂತಹ ಒಂದು ಕಹಿ ಘಟನೆ, ಅದರ ಬಗ್ಗೆ ಪದೆ ಪದೆ ವಿಚಾರ ಮಾಡಿ ಮಾಡಿ ಈ ರೋಗಕ್ಕೆ ತುತ್ತಾಗುತ್ತಾನೆ. ಈ ರೋಗವು ಒಂದು ಮೆದುಳಿನ ರೋಗ ಮೆದುಳಿನಲ್ಲಿರುವ ರಾಸಾಯನಿಕ ಕ್ರಿಯೆ ಬದಲಾವಣೆಯಿಂದ ಮಾನಸಿಕ ರೋಗಕ್ಕೆ ತತ್ತಾಗುತ್ತಾನೆ, ಲಕ್ಷಣಗಳೆಂದರೆ ವಿನಾಕಾರಣ ಅಳ್ಳುವುದು ನಗುವುದು, ಬೀದಿ ಸುತ್ತುವುದು. ಮಾನಸಿಕ ರೋಗಕ್ಕೆ ತುತ್ತಾದಂತಹ ವ್ಯಕ್ತಿಗೆ ಸೂಕ್ತವಾದ ಚಿಕಿತ್ಸೆ ನೀಡುವುದರ ಮೂಲಕ ಆ ವ್ಯಕ್ತಿ ಗುಣ ಹೊಂದುತ್ತಾನೆ. ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾದ ಚಿಕಿತ್ಸೆ ಇರುತದೆ ಎಂದು ಹೇಳಲಾಯಿತು. ಈ ಜಾಗ್ರತಿ ಕಾರ್ಯಕ್ರಮದಲ್ಲಿ ಒಟ್ಟು 12 ಜನರು ಭಾಗವಹಿಸಿದರು.



## “ಮಾನಸಿಕ ಅಸ್ವಸ್ಥತೆ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿ”



24–02–2025 ರಂದು ಬಸವಕಲ್ಯಾಣ ತಾಲೂಕಿನ  ಖಾನಾಪೂರ(ಕೆ) ವಾಡಿ ಗ್ರಾಮದಲ್ಲಿ ಸರ್ಕಾರಿ ಕೀರಿಯ ಪ್ರಾಥಮಿಕ ಶಾಲೆ ಯಲ್ಲಿ ಲಿವ್.ಲವ್.ಲಾಫ್ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಸಂಪನ್ಮೂಲ ವ್ಯಕ್ತಿ ಶ್ರೀ ಆಕಾಶ್ ರವರು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುತ್ತಾ ಮಾತನಾಡಿ,  ದೈಹಿಕವಾಗಿ, ಮಾನಸಿಕವಾಗಿ, ಶರೀರಕವಾಗಿ, ಮತ್ತು ಸಾಮಾಜಿಕವಾಗಿ ಚೆನ್ನಾಗಿರುವುದೇ ಪರಿಪೂರ್ಣ ಆರೋಗ್ಯ. ಮಾನಸಿಕ ಅಸ್ವಸ್ಥತೆ ಇದು ಒಂದು ಮೆದುಳಿನ ಕಾಯಿಲೆ, ಮೆದುಳಿನ ರಾಸಾಯನಿಕ ಕ್ರಿಯೆಯಲ್ಲಿ ಏರುಪೇರಾಗಿ ಮನುಷ್ಯನ ವರ್ತನೆಯಲ್ಲಿ ಬದಲಾವಣೆಯಾಗಿ, ತನ್ನ ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಕು ಉಂಟಾಗುವುದನ್ನು ಮಾನಸಿಕ ಅಸ್ವಸ್ಥತೆ ಎಂದು ಹೇಳುತ್ತೇವೆ. ಕಾಯಿಲೆಯ ಲಕ್ಷಣಗಳು: ಭಯ, ಆತಂಕ, ಖಿನ್ನತೆ, ಇತ್ಯಾದಿ ಇಂತಹ ಲಕ್ಷಣಗಳಿದ್ದರೆ, ಮನೋವೈದ್ಯರ ಬಳಿ ಚಿಕಿತ್ಸೆ ನೀಡುವುದರ ಮೂಲಕ ಗುಣಪಡಿಸಬಹುದು. ಸಮುದಾಯದಲ್ಲಿ ಮಾನಸಿಕ ಅಸ್ವಸ್ಥರು ಕಂಡರೆ ಅವರನ್ನು ನಿರ್ಲಕ್ಷಿಸದೆ ಸಹಾಯ ಮಾಡುವ ಭಾವನೆ ನಿಮ್ಮದಾಗಬೇಕು ಎಂದು ಹೇಳಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ 03 ಶಿಕ್ಷಕಿಯರು ಸೇರಿ ಒಟ್ಟು 50 ವಿದ್ಯಾರ್ಥಿಗಳು ಭಾಗವಹಿಸಿದರು.

## “ಮಾನಸಿಕ ಆರೋಗ್ಯದ ಕುರಿತು ಜಾಗೃತಿ”



ಫೆಬ್ರುವರಿ 07 2025ರಂದು ಬೀದರ್ ತಾಲೂಕಿನ ಬೆನಕನಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಮತ್ತು ಲಿವ್.ಲವ್.ಲಾಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ವಿದ್ಯಾರ್ಥಿಗಳಿಗೆ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸಲಾಯಿತು. ಈ ಜಾಗೃತಿ ಮೂಡಿಸಲು ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಆನಂದ್ ಅವರು ಮಾತನಾಡುತ್ತಾ ಆರೋಗ್ಯ ಎಂದರೇನು? ಮಾನಸಿಕ ಆರೋಗ್ಯ ಎಂದರೇನು? ಅದರ ಲಕ್ಷಣಗಳು ಮತ್ತು ಚಿಕಿತ್ಸೆಯ ವಿಧಾನದ ಕುರಿತು ತಿಳಿಸಿದರು. ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಅತಿಯಾಗಿ ಮೊಬೈಲ್ ಫೋನ್ ಬಳಕೆಯಿಂದ ನಿದ್ರಾಹಿನತೆ ಉಂಟಾಗಿ ಭಯ, ಆತಂಕ, ಖಿನ್ನತೆ ಯಂತಹ ಮಾನಸಿಕ ಲಕ್ಷಣಗಳು ಕಂಡುಬರುತ್ತಿವೆ. ಈ ರೂಢಿಯನ್ನು ತಪ್ಪಿಸಿ ಆರೋಗ್ಯಕರ ಜೀವನ ಶೈಲಿಯನ್ನು ರೂಢಿಸಿಕೊಳ್ಳಬೇಕು. ದಿನನಿತ್ಯ ವೇಳಾ ಪಟ್ಟಿಯಂತೆ ತಮ್ಮ ಕೆಲಸಗಳನ್ನು ಮಾಡಬೇಕು. ಮತ್ತು ಮಾನಸಿಕ ಆರೋಗ್ಯ ಸಹಾಯವಾಣಿ ಶುಲ್ಕ ರಹಿತ 14416 ಸಂಖ್ಯೆಗೆ ಕರೆಮಾಡಿ ಸಹಾಯ ಪಡೆಯಬಹುದು. ಮಾನಸಿಕ ಅಸ್ವಸ್ಥರು ಕಂಡಲ್ಲಿ ನಮ್ಮ ಸಂಸ್ಥೆಯ ಸಹಾಯವಾಣಿ ಸಂಖ್ಯೆ 9036664271 ಗೆ ಕರೆಮಾಡಿ ಸಹಾಯ ಪಡೆಯಬಹುದು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 35 ವಿದ್ಯಾರ್ಥಿಗಳು ಭಾಗವಹಿಸಿದ್ದರು.

## “ಮಾನಸಿಕ ಅಸ್ವಸ್ಥರ ಮತ್ತು ಕ್ಯಾನ್ಸರ್ ಜಾಗೃತ್ಯ ಕಾರ್ಯಕ್ರಮ”



ದಿನಾಂಕ 3/2/2025 ರಂದು ಕಮಲನಗರ್ ತಾಲೂಕಿನ ಲಕ್ಷಮಿನಗರ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರ ಮತ್ತು ಕ್ಯಾನ್ಸರ್ ಜಾಗೃತ್ಯ ಕಾರ್ಯಕ್ರಮ ನೀಡಲಾಯಿತು. ಆರ್ಬಿಟ್ ಸಂಸ್ಥೆಯ ಮತ್ತು ಎಲ್.ಎಲ್.ಎಲ್.ಎಫ್ ಸಂಯುಕ್ತ ಆಶ್ರಯದಲ್ಲಿ ಜಾಗೃತಿ ಕಾರ್ಯಕ್ರಮ ನಡೆಯಿತು. ಸಂಪನ್ಮೂಲ ವ್ಯಕ್ತಿಗಳಾದಂತ ಆಬಿರ್ಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಯೋಹಾನ್ ಅವರು ಮಾನಸಿಕ ರೋಗ ಹೇಗೆ ಬರುತ್ತದೆ ಎಂದರೆ ಒಬ್ಬ ವ್ಯಕ್ತಿಯ ಜೀವನ ದಲ್ಲಿ ನಡೆದಂತಹ ಒಂದು ಕಹಿ ಘಟನೆ ಅದರ ಬಗ್ಗೆ ವಿಚಾರ ಮಾಡಿಮಾಡಿ ಈ ರೋಗಕ್ಕೆ ತುತ್ತಾಗುತ್ತಾನೆ. ಈ ರೋಗವು ಒಂದು ಮೆದುಳಿನ ರೋಗ ಮೆದುಳಿನಲ್ಲಿರುವ ರಾಸಾಯನಿಕ ಕ್ರಿಯೆ ಬದಲಾವಣೆಯಿಂದ ಮಾನಸಿಕನಾಗುತ್ತಾನೆ. ಲಕ್ಷಣಗಳೆಂದರೆ ವಿನಾಕಾರಣ ಅಳುವುದು, ವಿನಾಕಾರಣ ನಗುವುದು, ಬೀದಿ ಸುತ್ತುವುದು, ಚಿಕ್ಕ ಚಿಕ್ಕ ವಸ್ತುಗಳನ್ನು ಸಂಗ್ರಹಿಸುವುದು, ಅನುಮಾನ ಪಡುವುದು ಇತ್ಯಾದಿ. ಮಾನಸಿಕ ರೋಗಕ್ಕೆ ತುತ್ತಾದಂತಹ ವ್ಯಕ್ತಿಗೆ ಸೂಕ್ತವಾದ ಚಿಕಿತ್ಸೆ ನೀಡುವುದರ ಮೂಲಕ ಆ ವ್ಯಕ್ತಿ ಗುಣ ಹೊಂದುತ್ತಾನೆ. ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾದ ಚಿಕಿತ್ಸೆ ಇರುವುದು ಎಂದು ಜಾಗೃತಿ ಮೂಡಿಸಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಗ್ರಾಮದ 25 ಜನ ಭಾಗಿಯಾಗಿದ್ದರು.

# ಮಹಿಳಾ ಸಬಲೀಕರಣ ಕಾರ್ಯಕ್ರಮ”

## “ಉಚಿತ ಆರೋಗ್ಯ ಮತ್ತು ಕ್ಯಾನ್ಸರ್ ತಪಾಸಣೆ ಶಿಬಿರ”




ದಿನಾಂಕ 21.02.2025ರಂದು ಹುಮ್ನಾಬಾದ್ ತಾಲೂಕಿನ ಸೀತಾಳಗೇರಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿ ಸಂಯುಕ್ತ ಆಶ್ರಯದಲ್ಲಿ ಉಚಿತ ಆರೋಗ್ಯ ಮತ್ತು ಕ್ಯಾನ್ಸರ್ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ತಪಾಸಣೆ ಶಿಬಿರವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಫಾದರ್ ಜಾರ್ಜ ತಾಳ್‌ಮಡಗಿ ಕೇಂದ್ರ ನಿರ್ದೇಶಕರು ಮಾತನಾಡುತ್ತಾ, ಆರೋಗ್ಯವೇ ನಮ್ಮೆಲ್ಲರ ಭಾಗ್ಯ ನಮ್ಮ ಆರೋಗ್ಯದಲ್ಲಿ ಎಷ್ಟೊಂದು ಕುಂದು ಕೊರತೆಗಳಿವೆ ಎಂಬುದು ನಮಗೆ ಗೊತ್ತಾಗುವುದಿಲ್ಲ, ಹಾಗಾಗಿ ಈ ಶಬೀರದ ಮೂಲಕ ತಪಾಸಣೆ ಮಾಡಿಕೊಂಡು ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಹಾಗೂ ಆರೋಗ್ಯವಂತ ಜೀವನ ನಡೆಸುವುದು ನಮ್ಮ ಆದಿ ಕರ್ತವವಾಗಿರಬೇಕು, ಇದರ ಸದುಪಯೋಗ ತಾವೆಲ್ಲರೂ ಪಡೆದುಕೊಳ್ಳಬೇಕು ಹಾಗೂ ಇತರರಿಗೂ ತಿಳಿಸಬೇಕು ಎಂದು ಶುಭ ಹಾರೈಸಿದರು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಶ್ರೀ, ಸುಭಾಷ್ ಗಂಗಾ ಅವರು ಕ್ಯಾನ್ಸರ್ ರೋಗದ ಕುರಿತು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು, ನೀವು ನಿಮ್ಮ ಮಕ್ಕಳಿಗೆ ಅಂಗಡಿಯಲ್ಲಿ ದೊರಕುವ ಚಿಪ್ಸ್, ಕುರ್ಕುರೆ, ಪಾನಿಪುರಿ, ಇಂಥ ಪದಾರ್ಥಗಳ ಸೇವನೆಯಿಂದ ಕ್ಯಾನ್ಸರ್ ಕಾಯಿಲೆ ಬರುವುದು ಖಂಡಿತ, ಹಾಗಾಗಿ ಈ ಪದಾರ್ಥಗಳಿಂದ ನಿಮ್ಮ ಮಕ್ಕಳನ್ನು ದೂರವಿಡಿ ಎಂದು ಸಲಹೆ ನೀಡಿದರು. ಈ ಕಾರ್ಯಕ್ರಮಕ್ಕೆ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರಮೇಶ್ ಮಂಡಳ್ಕರ್, ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಪ್ರಭಾವಿ ಮುಖ್ಯ ಗುರುಗಳಾದ ಶ್ರೀ ಸೂರ್ಯಕಾಂತ್ ಹಾಗೂ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ವಿಜಯ್ ಕುಮಾರ್ ಮತ್ತು ತಾಳಮಡಗಿ ಕೇಂದ್ರದ ನಿರ್ದೇಶಕರಾದ ಪದರ್ ಜಾರ್ಜ್, ಮತ್ತು ಗ್ರಾಮ ಪಂಚಾಯತ್ ಸದಸ್ಯರಾದ ಶ್ರೀ ಸ್ವಾಮಿದಾಸ್, ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಕಾ ಮಡಗಿ ಕೇಂದ್ರದ ಶ್ರೀ ವಿನಾಯಕ್ ಸಿ.ಎಚ್.ಓ ಹಾಗೂ ದಂತ ವೈದ್ಯರಾದ ಅಬ್ದುಲ್ ಸುಫ್ಯಾನ್ ಮತ್ತು ವೆಲ್ ಮಗ್ನಾ ಆಸ್ಪತ್ರೆ ಕುಮಾರಿ ಅಶ್ವಿನಿ ಮತ್ತು ಅರುಣ್ ಅರುಣ, ಮುಂತಾದವರು ಭಾಗವಹಿಸಿದ. ಈ ಕಾರ್ಯಕ್ರಮವನ್ನು ಅಮಿತಾ ಅವರು ನಿರೂಪಣೆ ಮಾಡಿದರು, ಶಾಲಾ ಮಕ್ಕಳು ಪ್ರಾರ್ಥನ ಗೀತೆ ವಿವರಿಸಿ ಕೊಟ್ಟರು, ಸವಿತಾ ಅವರು ವಂದನಾರ್ಪಣೆ ಮೂಲಕ ಕಾರ್ಯಕ್ರಮ ಮುಕ್ತಾಯ ಮಾಡಿದರು.

## “ಸರಕಾರಿ ಸೌಲಭ್ಯ” “ನಾಯಕತ್ವ ವಕಲತು ಮತ್ತು ಜಾಲ ಬಂದ”



ಚಟಗುಪ್ಪ ತಾಲೂಕಿನ ವಡ್ಡನ್ಕೇರ ಗ್ರಾಮದಲ್ಲಿ ಸರೋಜಿನಿ ಮಹಿಳಾ ಸ್ವಸಹಾಯ ಸಂಘ ರಚನೆ ಮಾಡಲಾಯಿತು. ಶ್ರೀಮತಿ ಲಕ್ಷ್ಮಿ ಗಂಡ ಶಿರೋಮಣಿ ಇವರು ಸಂಘದಲ್ಲಿ ಸದಸ್ಯರಾಗಿ ಸೇರಿಕೊಂಡರು ಸುಮಾರು 20 ವರ್ಷಗಳಿಂದ ಸ್ವಸಾಯ ಸಂಘದಲ್ಲಿ ಸದಸ್ಯರಾಗಿ ರೂಪಗೊಂಡಿದ್ದಾರೆ ಆರ್ಬಿಟ್ ಸಂಸ್ಥೆಯು ನೀಡಿದಂತಹ ಹಲವಾರು ತರಬೇತಿಗಳಾದ ಸರಕಾರಿ ಸೌಲಭ್ಯ ನಾಯಕತ್ವ ವಕಲತ ಮತ್ತು ಜಾಲ ಬಂದ ಸ್ವಉದ್ಯೋಗ ಇವುಗಳ ಕುರಿತು ತರಬೇತಿಯನ್ನು ಪಡೆದುಕೊಂಡು, ಲೇಬರ್ ಕಾರ್ಡ್, ಈಶ್ರಮ್ ಕಾರ್ಡ್, ರೇಷನ್ ಕಾರ್ಡ್, ಜಾಬ್ ಕಾರ್ಡ್ ಇವುಗಳನ್ನು ಮಾಡಿಸಿಕೊಂಡಿರುತ್ತಾರೆ. ಹಾಗೆ ಅವರ ಯಜಮಾನರು ತೀರಿ ಹೋದ ನಂತರ ಮರಣ ಪ್ರಮಾಣ ಪತ್ರ ಮಾಡಿಸಿಕೊಂಡು ಪ್ರತಿ ತಿಂಗಳು ವಿಧವೆ ವೇತನ ಹಣ ಬರುವಂತೆ ಇಲಾಖೆಗಳಿಗೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಜಾಲ ಬಂದ ಬೆಳಸಿ ಹಣ ಬರುವಂತೆ ಮಾಡಿಕೊಂಡಿರುತ್ತಾರೆ. ಸರಕಾರದಿಂದ ವಸತಿ ಸಹ ಪಡೆದುಕೊಂಡಿದ್ದಾರೆ ಅದೇ ರೀತಿ ಸ್ವಸಹಾಯ ಸಂಘದಿಂದ ಸಾಲವನ್ನು ಪಡೆದು ಒಂದು ಆಕಳನ ಖರೀದಿಸಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ ಅದೇ ರೀತಿ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಕೊಡಿಸಿದ್ದಾರೆ ವಾಸಿಸಲು ಉತ್ತಮವಾದ ಮನೆಯನ್ನು ಕಟ್ಟಿಕೊಂಡಿದ್ದಾರೆ. ಕಷ್ಟದಲ್ಲಿ ನೋವಿನಲ್ಲಿ ಇದ್ದಂತ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಯು ಧೈರ್ಯ ತುಂಬಿ ಇಷ್ಟೆಲ್ಲಾ ಸವಲತ್ತುಗಳನ್ನು ಪಡೆದುಕೊಳ್ಳಲು ಮಾರ್ಗದರ್ಶನ ನೀಡಿ ಸಹಾಯ ಮಾಡಿದಂತ ಆರ್ಬಿಟ್ ಸಂಸ್ಥೆಗೆ ಮನದಾಳದ ವಂದನೆಗಳನ್ನು ಸಲ್ಲಿಸುತ್ತೇನೆ.

## "ಸಂರಕ್ಷಣೆಯ ಮತ್ತು ಸುರಕ್ಷತೆ ಕುರಿತು ತರಬೇತಿ"



ದಿನಾಂಕ 13.02.2025 ರಂದು ಧಾರವಾಡ ಜಿಲ್ಲೆಯ ಸೇವಾಲಾಲ್ ಸಂಸ್ಥೆಯಲ್ಲಿ ಸಂರಕ್ಷಣೆ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ತರಬೇತಿಯ ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಕ್ರಾಸ್ ಸಂಸ್ಥೆಯ ಅಕೌಂಟೆಂಟ್ ಮೋನಿಕಾ ರವರು ಸಂರಕ್ಷಣೆಯ ತರಬೇತಿಯನ್ನು ನೀಡಿದರು. ಸಂರಕ್ಷಣೆ ಎಂದರೆ ರಕ್ಷಣೆ ಅಥವಾ ಕಾಪಾಡುವುದು ಸ್ವಯಂ ರಕ್ಷಣೆಯನ್ನು ಯಾವ ರೀತಿ ಮಾಡಿಕೊಳ್ಳಬೇಕು. ತಮ್ಮ ರಕ್ಷಣೆಯನ್ನು ಕಾಪಾಡಿಕೊಳ್ಳುವುದಕ್ಕೆ ಯಾವುದೆಲ್ಲ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಸಮಸ್ಯೆ ಆದಾಗ ಯಾವ ರೀತಿ ಪರಿಹಾರವನ್ನು ಕಂಡುಕೊಳ್ಳಬೇಕು ಯಾವ ಕಮಿಟಿಗಳಿಗೆ ಭೇಟಿ ನೀಡಬೇಕು ಅವರಿಂದ ನ್ಯಾಯವನ್ನು ಪಡೆದುಕೊಳ್ಳಬೇಕು ಎಂಬುದರ ಬಗ್ಗೆ ಸುವಿಸ್ತಾರವಾಗಿ ಈ ತರಬೇತಿಯಲ್ಲಿ ತಿಳಿಸಿದರು.

## "ಸಮುದಾಯ ಆಧಾರಿತ ಪ್ರೇರಿತ ಅಭಿವೃದ್ಧಿ ವಿಧಾನ ಕುರಿತು ತರಬೇತಿ"



ಫೆಬ್ರುವರಿ 13 2025 ರಂದು ಧಾರವಾಡ ಸೇವಾಲಯ ಸಂಸ್ಥೆಯಲ್ಲಿ ಕ್ರಾಸ್ ಸಂಸ್ಥೆಯ ಅಧೀನದಲ್ಲಿ ಬರುವಂತಹ ಮೂರು ಸಹಭಾಗಿ ಸಂಸ್ಥೆಯವರಿಗೆ ಸಮುದಾಯ ಆಧಾರಿತ ಪ್ರೇರಿತ ಅಭಿವೃದ್ಧಿ ವಿಧಾನ ಕುರಿತು ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಅತಿ ವಂದನೀಯ ಫಾದರ್ ರಿಚರ್ಡ್ ಪಾಯ್ಸ್ ನಿರ್ದೇಶಕರು ಕ್ರಾಸ್ ಸಂಸ್ಥೆ ಬೆಂಗಳೂರು ಸಂಪನ್ಮೂಲ ವ್ಯಕ್ತಿಯಾಗಿದ್ದು, ಸಮುದಾಯದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಾದರೆ ಮಹಾಸಂಗ ಮತ್ತು ಒಕ್ಕೂಟಗಳ ಜವಾಬ್ದಾರಿ ಅತಿ ಹಿರಿದಾಗಿದೆ ಎಂಬುದಾಗಿ ತರಬೇತಿ ನೀಡಿದರು. ತರಬೇತಿಯಲ್ಲಿ ಉಪಸ್ಥಿತರಿರುವಂತಹ ಫಾದರ್ ಆಶೀರ್ವಾದ ಸೇವಾಲಯ ಸಂಸ್ಥೆಯ ನಿರ್ದೇಶಕರು ಪ್ರಾಸ್ತಾವಿಕ ನುಡಿಯಲ್ಲಿ ಒಗ್ಗಟ್ಟಿನಲ್ಲಿ ಬಲವಿದೆ ಎಂಬುದಾಗಿ ತಿಳಿಸಿದರು. ಈ ತರಬೇತಿಯಲ್ಲಿ ಸಿಸ್ಟರ್ ನ್ಯಾನ್ಸಿ ಮಹಿಳಾ ಸಬಲೀಕರಣ ಯೋಜನೆಯ ಸಲಹೆಗಾರರು ಉಪಸ್ಥಿತರಿದ್ದು ಎಲ್ಲ ಶಿಬಿರಾರ್ಥಿಗಳನ್ನು ಹುರಿದುಂಬಿಸುತ್ತಿದ್ದರು. ಒಟ್ಟು 39 ಫಲಾನುಭವಿಗಳು ಭಾಗವಹಿಸಿ ಸಮುದಾಯದ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೇಗೆ ಪರಿಹರಿಸಿಕೊಳ್ಳಬೇಕು ಎಂಬುದರ ಕುರಿತು ತಿಳಿದುಕೊಂಡರು.

## "ಸಮುದಾಯ ಅಭಿವೃದ್ಧಿಯ ಅರಿವು" ಸರ್ಕಾರಿ ಸೌಲಭ್ಯ"



ಹುಮ್ನಾಬಾದ್ ತಾಲೂಕಿನ ದುಮ್ಮನಸೂರು ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಯೋಜನೆ ಅಡಿಯಲ್ಲಿ ಮಹಿಳಾ ಸ್ವಸಾಯ ಸಂಘ ಮತ್ತು ಸಂಜನಾ ಮಹಾಸಂಗ ರಚನೆ ಮಾಡಲಾಗಿದ್ದು. ಮಹಿಳೆಯರಿಗೆ ಸಣ್ಣ ಉಳಿತಾಯದಿಂದ ಅವರು ಮತ್ತು ಅವರ ಕುಟುಂಬ ಹಾಗೂ ಸಮುದಾಯ ಅಭಿವೃದ್ಧಿಯ ಅರಿವು ಮಾರ್ಗದರ್ಶನವನ್ನು ನೀಡುತ್ತಾ ನಾಯಕರಾಗಿ ಬೆಳೆಯುವುದರೊಂದಿಗೆ ಸರ್ಕಾರಿ ಸೌಲಭ್ಯಗಳು ಪಡೆದುಕೊಳ್ಳುವ ರೀತಿ ನೀತಿಗಳನ್ನು ತಿಳಿಸುತ್ತಾ, ಅರಿವು ಜ್ಞಾನ ಮತ್ತು ತರಬೇತಿಗಳು ನೀಡುವುದರೊಂದಿಗೆ ಮಹಿಳೆಯರು ವಿವಿಧ ಇಲಾಖೆಗಳಿಗೆ ಮತ್ತು ಅಧಿಕಾರಿಗಳೊಂದಿಗೆ ಉತ್ತಮ ಜಾಲಬಂದ ಬೆಳೆಸಿಕೊಂಡು ಸಮಸ್ಯೆಗಳನ್ನು ಗುರುತಿಸಿ ಅರ್ಜಿಯ ಮೂಲಕ ವಿಷಯಗಳನ್ನು ತಿಳಿಸಿ ಪರಿಹಾರ ಕೊಂಡುಕೊಳ್ಳಬೇಕು. ಎಂದು ತಿಳಿಸಿದಾಗ ಸದಸ್ಯರೆಲ್ಲರೂ ಓಣಿಯ ಸಮಸ್ಯೆಯನ್ನು ಗುರುತಿಸಿ ಚರಂಡಿ ನಿರ್ಮಾಣ ಮತ್ತು ಸಿಸಿ ರಸ್ತೆ ಮಾಡುವುದರ ಕುರಿತಾಗಿ ಸಂಜನಾ ಮಹಾಸಂಗದಿಂದ ಅರ್ಜಿಯನ್ನು ಬರೆದು ಅಧಿಕಾರಿಗಳಿಗೆ ಒಪ್ಪಿಸಿರುವ ಪರಿಣಾಮವಾಗಿ ಅವರ ಓಣಿಯಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣವಾಗಿದೆ. ಸಂಘ ಮಾಡಿರುವುದರಿಂದ ನಮಗೆ ವಿಷಯಗಳನ್ನು ತಿಳಿದುಕೊಳ್ಳಲು ಮತ್ತು ನಾವು ಬೆಳೆಯಲು ಬಹಳ ಅನುಕೂಲವಾಗಿದೆ.ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

## "ಜನ ಜಾಗೃತಿ ತಾಲೂಕು ಒಕ್ಕೂಟ ಸಭೆ"




ಫೆಬ್ರುವರಿ 17 2025ರಂದು ಬಾಲ್ಕಿಯಲ್ಲಿ ಜನಜಾಗೃತಿ ತಾಲೂಕು ಒಕ್ಕೂಟ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಸಂಪನ್ಮೂಲ ವ್ಯಕ್ತಿಯಾದ ಮಹಿಳಾ ಸಬಲೀಕರಣದ ಸಂಯೋಜಕರು ಶ್ರೀಮತಿ ನಿರ್ಮಲಾ ರವರು ಮಹಿಳಾ ದಿನಾಚರಣೆಯ ಕುರಿತು ಒಕ್ಕೂಟದಲ್ಲಿ ಪದಾಧಿಕಾರಿಗಳೊಂದಿಗೆ ಚರ್ಚೆ ಮಾಡಲಾಯಿತು. ಮಹಿಳಾ ದಿನಾಚರಣೆ ವೆಂದರೆ ಮಹಿಳೆಯರಿಗಾಗಿಯೇ ಮೀಸಲಾಗಿರುವ ದಿನ ಆಚರಣೆ ಮಾಡಬೇಕು, ಮಹಿಳೆಯರು ಆಟ ಸ್ಪರ್ಧೆಯ ಮುಖಾಂತರ ಮತ್ತು ಕೋಲಾಟದ ಮುಖಾಂತರ ಅದ್ದೂರಿಯಾಗಿ ಆಚರಣೆ ಮಾಡುವುದರ ಜೊತೆಗೆ ಶಿಸ್ತನ್ನು ಕೂಡ ಕಾಪಾಡಿಕೊಳ್ಳಬೇಕು. ಒಕ್ಕೂಟ ಪದಾಧಿಕಾರಿಗಳು ಮಹಾಸಂಘದಲ್ಲಿ ಮಾಹಿತಿ ನೀಡಿ ಎಲ್ಲಾ ಸದಸ್ಯರೊಂದಿಗೆ ಬರಬೇಕೆಂದು ತಿಳಿಸಿದರು ಮಹಿಳಾ ದಿನಾಚರಣೆ ಕ್ಕೆ ನಿಮ್ಮೆಲ್ಲರ ಸಹಾಯ ಬೇಕಾಗುತ್ತದೆ. ಎಲ್ಲಾ ಮಹಿಳೆಯರು ಭಾಗವಹಿಸಬೇಕು ಎಂದು ಸಂಪೂರ್ಣವಾಗಿ ಮಾಹಿತಿಯನ್ನು ತಿಳಿಸಿದರು. ಮತ್ತು ಶರಣಪ್ರಸಾದ ತತ್ವ ಸಂಸ್ಥೆ ಬೀದರ್ ವತಿಯಿಂದ ಗುಪ್ತ ರೋಗಗಳ ಬಗ್ಗೆ ಮಾಹಿತಿ ಕೊಡಿಸಿ ಗುಪ್ತ ರೋಗದ ಬಗ್ಗೆ ಪರಿಶೀಲನೆ ಮಾಡಿಸಲಾಯಿತು. ಶ್ರೀಮತಿ ಕೀರ್ತಿ ಅವರ ಧನ್ಯವಾದಗಳೊಂದಿಗೆ ಈ ಸಭೆಯನ್ನು ಮುಕ್ತಾಯವಾಯಿತು.

## "ವಿಶ್ವ ಕ್ಯಾನ್ಸರ್ ದಿನಾಚರಣೆ" ಲಕ್ಕಿ ಕೂಪನ್ ಡ್ರಾ ! ಫಲಾನುಭವಿಗಳಿಗೆ ಆಕರ್ಶಕ ಬಹುಮಾನ ವಿತರಣೆ"





04 ಫೆಬ್ರುವರಿ 2025 ರಂದು ಆರ್ಬಿಟ್ ಸಂಸ್ಥೆಯ ಅವರಣದಲ್ಲಿ ವಿಶ್ವ ಕ್ಯಾನ್ಸರ್ ದಿನಾಚರಣೆಯನ್ನು ಆಚಾರಿಸಲಾಗಿತ್ತು. ಸಮಾಜದಲ್ಲಿ ಕ್ಯಾನ್ಸರ್ ಪಿಡಿತರಾಗಿ ಬಳಲುತ್ತಿರುವ ಜನರಿಗಾಗಿ ದೇಣಿಗೆಗಳನ್ನು ಸಂಗ್ರಹಿಸಿ ಅವರನ್ನು ಸೂಕ್ತ ಸಮಯಕ್ಕೆ ಅವರನ್ನು ಔಷಧಿಗಳಿಗಾಗಿ ಹಾಗೂ ಉಪಚಾರಕ್ಕಗಿ ಸಹಾಯಮಾದುವುದಕ್ಕಗಿ ಆರ್ಬಿಟ್ ಸಂಸ್ಥಯ ಕಾರ್ಯಕರ್ತರಿಂದ ಕೂಪನ್‌ಗಳನ್ನು ಸಮಾಜದ ಜನರಿಗೆ ಕೊಟ್ಟು ಅವರಿಂದ ಆದಷ್ಟು ದೇಣಿಗೆಯನ್ನು ಸಂಗ್ರಹಿಸಿದರು. ಈ ಕೂಪನ್‌ಗಳಿಗೆ ಸಹಾಯ ಮಾಡಿದ ಫಲಾನುಭವಿಗಳಿಗೆ ಐರು (5) ಆಕರ್ಶಕ ಬಹುಮಾನಗಳನ್ನು ವಿತರಿಸುವ ಕುರಿತಾಗಿ ಲಕ್ಕಿ ಕೂಪನ್ ಡ್ರಾ ಕಾರ್ಯಕ್ರಮವನ್ನು ಮಾಡಲಾಯಿತು. ಈ ಬಹುಮಾನಗಳನ್ನು ಆರ್ಬಿಟ್ ಸಂಸ್ಥೆಯ ನಿರ್ಧೇಶಕರಾದ ಫಾ. ವಿಕ್ಟರ್ ವಾಸ್, ಸಂಪನ್ಮೂಲ ವ್ಯಕಿಗಳಾದ ಜಾಕ್ಸನ್ ರವರು ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಸಿಸ್ಟರ ಏಡ್ನಾ ಸ್ಪರ್ಶ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಯೊಹಾನ್ ಹಾಗೂ ಸಂಸ್ಥೆಯ ಸಿಬ್ಬಂಧಿ ವರ್ಗದವರು ಸೇರಿ 12 ಜನರು ಉಪಸ್ಥತರಿದ್ದರು. ಲಕ್ಕಿ ಫಲಾನುಭವಿಗಳಿಗೆ ಬಹುಮಾನಗಳನ್ನು ವಿತರಿಸಿದರು.

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## "ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿಶಿಘ್ರ ಪತ್ತೆ ಹಚ್ಚುವಿಕೆ ಕಾರ್ಯಕ್ರಮ"



27 ಫೆಬ್ರವರಿ 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮ್‌ಜೀ ಅವರ ಸಂಯುಕ್ತ ಆಶ್ರಯದಲ್ಲಿ ಕಲಬುರಗಿ ತಾಲೂಕಿನ ಸೀತ್ನೂರ ಗ್ರಾಮದ ಪ್ರಾಥಮಿಕ ಮತ್ತು ಪ್ರೌಢ ಸರ್ಕಾರಿ ಪ್ರೌಢ ಶಾಲೆಯಲ್ಲಿ ಶಿಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಬೆಳವಣಿಗೆಯಲ್ಲಿ, ಕುಂಠಿತವಿರುವ ಮಕ್ಕಳು ಯಾವರೀತಿಯಾಗಿ ಇರುವರು ಎಂದು ಮಾಹಿತಿ ನೀಡಲಾಯಿತು. 0–6 ವರ್ಷದಲ್ಲಿ ಮಕ್ಕಳಲ್ಲಿ ನ್ಯೂನ್ಯತೆಕಂಡು ಬಂದರೆ ಮೂರು ತಿಂಗಳಲ್ಲಿ ಕತ್ತು ನಿಲ್ಲಬೇಕು, ಒಂಬತ್ತು ತಿಂಗಳಲ್ಲಿ ಮಗು ಅಂಬೆಗಾಲು ಹಾಕಬೇಕು, ಒಂದು ವರ್ಷದಲ್ಲಿ ಮಗು 2–3 ಪದ ಆಡಬೇಕು, ಎರಡು ಮತ್ತು ಮೂರು ವಸ್ತುಗಳನ್ನು ಗುರುತಿಸಬೇಕು, 5–6 ವರ್ಷದ ಮಗು ತಾನಾಗಿಯೇ ಸಾಮಾಜಿಕವಾಗಿ ಎಲ್ಲರ ಜೊತೆ ಬೇರೆಯಬೇಕು, 6 ವರ್ಷದ ಮಗು ಕಡ್ಡಾಯವಾಗಿ ಶಾಲೆಗೆ ಹೋಗಬೇಕು ನಾವು ಹೇಳಿದ ಹಾಗೆ ಈ ಎಲ್ಲಾ ಮೇಲಿನ ಅಂಶಗಳು ಕಂಡು ಬರದೆಯಿದ್ದಲ್ಲಿ ಮಗುವಿನ ಬೆಳವಣಿಗೆ ಹಂತಗಳಲ್ಲಿ ಕುಂಠಿತಗೊಳ್ಳವುದು ಎಂದು ದಾಕ್ಷಾಯಣಿ ಅವರು ಮಾಹಿತಿ ತಿಳಿಸಿದರು.

## "ಆರ್.ಟಿ.ಇ ಕುರಿತು ಜಾಗೃತಿ ಕಾರ್ಯಕ್ರಮ"



10 ಫೆಬ್ರವರಿ 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮ್‌ಜೀ ಜೀ ಫೌಂಡೆಶನ್ ಸಂಯೋಗದಲ್ಲಿ ಕಲಬುರಗಿ ತಾಲ್ಲೂಕಿನ ಹಡಗಿಲ್ ಹಾರುತಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಶಿಕ್ಷಣ ಹಕ್ಕು ಕಾಯಿದೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಆರ್.ಟಿ.ಇ ಎಂದರೇನು? ಇದರ ಸೌಲಭ್ಯ ಯಾರು ನೀಡುತ್ತಾರೆ, ಹೇಗೆ ನೀಡುತ್ತಾರೆ ಎಂಬುದರ ಕುರಿತು ಎಪ್ರಿಲ್ 1 2010 ರಂದು ಶಿಕ್ಷಣ ಕಾಯಿದೆ ಕಾನೂನನ್ನು ಜಾರಿಗೊಳಿಸುತ್ತದೆ. ಇದರಲ್ಲಿ 6ರಿಂದ 14 ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕು ಎಂದು ಕಾನೂನಿನಲ್ಲಿ ಜಾರಿಗೆ ತರುತ್ತಾರೆ ಎಂದು ಲಕ್ಷ್ಮೀಅವರು ತಿಳಿಸಿದರು. ಒಟ್ಟು 45 ಜನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಶ್ರೀದೇವಿ ಶಿಕ್ಷಕಿಯರು ಭಾಗವಹಿಸಿದರು.

## "ಆರೋಗ್ಯಕರ ಜೀವನಕ್ಕಾಗಿ ಪೌಷ್ಠಿಕ ಆಹಾರ ಸೇವನೆಯ ಮಹತ್ವ"



ಕಲಬುರಗಿ ನಗರದಲ್ಲಿ ಬರುವ ಪೋಲಿಸ ಕಾಲೋನಿಯಲ್ಲಿ ಫೆಬ್ರವರಿ 7 2025ರಂದು ಆರೋಗ್ಯಕರ ಜೀವನಕ್ಕಾಗಿ ಪೌಷ್ಠಿಕ ಆಹಾರ ಸೇವನೆಯ ಮಹತ್ವದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಸೇವಾಸಂಗಮ ಸಂಸ್ಥೆ ಹಾಗೂ ಮಹಿಳಾ ಮಕ್ಕಳ ಅಭಿವೃದ್ದ ಇಲಾಖೆ ಇವರ ಸಂಯಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಯಿತು. ಮಕ್ಕಳ ತಾಯಿಂದಿರನ್ನು ಉದ್ದೇಶಿಸಿ ಕುಮಾರಿ ಅನೀತಾ ಅವರು ಮಾತನಾಡುತ್ತಾ, ಪ್ರಸ್ತುತ ದಿನಗಳಲ್ಲಿ ಮಹಿಳೆಯರಿಗೆ ಅವಶ್ಯಕತೆಯಾದ ಆಹಾರವಾಗಿದೆ. ಮಹಿಳೆಯರು ಪ್ರತಿ ದಿನ ಆಹಾರ ಪದ್ದತಿಯಲ್ಲಿ ಕಬ್ಬಿಣ ಅಂಶ ರಕ್ತದ ಬೆಳವಣಿಗೆಗಾಗಿ ಹಸಿರು ತರಕಾರಿ, ಮೋಳಕೆಕಾಳು ಬೆಳೆಕಾಳು, ಸೇವಿಸುವಂತೆ ಆಗಬೇಕು. ಈ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯಾದ ಶ್ರೀಮತಿ ಗೌರಮ್ಮ, ಕುಮಾರಿ ಅನೀತಾ ಪಾಲಕರು ಹಾಗೂ ಮಕ್ಕಳು 10 ಜನ ಭಾಗವಹಿಸಿದರು.

## "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ"



4 ಫೆಬ್ರವರಿ 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮ್‌ಜೀ ಫೌಂಡೆಶನ್ ಸಂಯೋಗದಲ್ಲಿ ಶಿಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ ಕಲಬುರಗಿ ನಗರದಲ್ಲಿರುವ ಎಂ.ಎಸ್.ಮಿಲ್ ಏರಿಯಾದಲ್ಲಿ 0 ರಿಂದ 6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳಲ್ಲಿರುವ ನ್ಯೂನತೆಯನ್ನು ಹೇಗೆ ಗುರುತಿಸಬೇಕು ಮತ್ತು ಗುರುತಿಸಿದ ಮಕ್ಕಳನ್ನು ಹೇಗೆ ಚಟುವಟಿಕೆ ಮಾಡಿ ಅವರಲ್ಲಿರುವ ನ್ಯೂನತೆಯ ತೀವ್ರತೆಯನ್ನು ಕಡಿಮೆ ಮಾಡಬಹುದು ಎಂದು ಶ್ರೀಯುತ ಶಿವಕಾಂತ್ ಅವರು 20 ಜನ ಮಹಿಳೆಯರಿಗೆ ಮಾಹಿತಿ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಸಿಸ್ಟರ ನೀರ್ಮಲಾ ಮಾಲಾಶ್ರೀ ಅವರು ಉಪಸ್ಥಿತರಿದ್ದರು.

## "ಸಿಬ್ಬಂದಿ ವರ್ಗದವರೆಗೆ ತರಬೇತಿ"



ಫೇಬ್ರವರಿ ತಿಂಗಳ 17 ರಿಂದ 21 ರ ವರೆಗೆ ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಫ್ರೇಮಜೀ ಫೌಂಡೇಶನ ಸಂಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕ್ಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಅಡಿಯಲ್ಲಿ 5 ದಿನಗಳ ವರೆಗೆ ಯೋಜನೆಯ ಎಲ್ಲಾ ಕಾರ್ಯಕರ್ತರಿಗೆ ತರಬೇತಿಯನ್ನು ಹಮ್ಮಿಕ್ಕೋಳಲಾಯಿತ್ತು. ಈ ತರಬೇತಿಗೆ ಸಂಪನ್ಮೋಲ ವ್ಯಕ್ತಿಗಳಾಗಿ ಸಾಕ್ಯ ಸಂಸ್ಥೆ ಬೆಂಗಳೂರನಿಂದ ಆಗಮಿಸಿದ ಶ್ರೀಮತಿ ನೇತ್ರಾ ಹಾಗೂ ಕುಮಾರಿ. ಪ್ರೀಯಾ ಅವರು ಕಾರ್ಯಕರ್ತರಿಗೆ ಸ್ವಿಚ್ ಚಟುವಟಿಕೆಯಲ್ಲಿ ಮಕ್ಕಳಿಗೆ ಬಣ್ಣಗಳನ್ನು ಗುರುತಿಸುವಿಕೆ, ಬಣ್ಣಗಳನ್ನು ಹೊಂದಿಸುವುದು ಹಾಗೂ ಒರೋ ಮೋಟರ್ ಚಟುವಟಿಕೆ, ಮಕ್ಕಳಿಗೆ ಹಲವಾರು ರೀತಿಯ ಚಟುವಟಿಕೆಗಳ ಬಗ್ಗೆ ತರಬೇತಿ ನೀಡಿದ್ದರು. ಹಾಗೆ ಯಾವ ಮಕ್ಕಳಿಗೆ ಯಾವರೀತಿಯ ಚಟುವಟಿಕೆ ನೀಡಿದರೆ ಮಕ್ಕಳಲ್ಲಿ ಬದಲಾವಣೆ ಹೊಂದುವುದು ಎಂದು ಪಾಲಕರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ತರಬೇತಿ ನೀಡಿದ್ದರು.

## "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ ಕಾರ್ಯಕ್ರಮ"



ಫೆಬ್ರವರಿ 13 2025ರಂದು ಕಲಬುರಗಿ ತಾಲ್ಲೂಕಿನಲ್ಲಿ ಬರುವ ಖಣದಾಳ ತಾಂಡದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವಾಸಂಗಮ ಸಂಸ್ಥೆ ಕಲಬುರಗಿ ಹಾಗೂ ಅಜೀಮ್ ಪ್ರೇಮಜೀ ಫೌಂಡೆಶನ್ ವತಿಯಿಂದ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ರಾಜಕುಮಾರ ಕಾರ್ಯಕರ್ತರು ಇವರು ಮಾತನಾಡಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳಲ್ಲಿ ಕಂಡು ಬರುವ ಪ್ರಮುಖವಾದ ಅಂಶಗಳು ದೈಹಿಕ ಬೆಳವಣಿಗೆ, ಮಾನಸಿಕ ಬೆಳವಣಿಗೆ, ಭೌತಿಕ ಬೆಳವಣಿಗೆ, ಭಾಷಾ ಬಳವಣಿಗೆ ಹಾಗೂ ಸಾಮಾಜಿಕ ಬೆಳವಣಿಗೆಯ ಹಂತಗಳಲ್ಲಿ ಅಧಿಕವಾಗಿ ಬೆಳವಣಿಗೆ ಕುಂಠಿತಗೊಳುವ ಸಾಧ್ಯತೆ ಇರುತ್ತದೆ ಎಂದು ಹೇಳಿದರು. ಕಾರ್ಯಕ್ರಮದ ವೇದಿಕೆಯಲ್ಲಿ ಸಹ ಶಿಕ್ಷಕರು ಉಪಸ್ಥಿತರಿದ್ದು, ಕಾರ್ಯಕ್ರಮದಲ್ಲಿ 40 ಶಾಲಾ ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

## "ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಬಗ್ಗೆ ಮಾಹಿತಿ"



23 ಫೆಬ್ರವರಿ 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮ್‌ಜೀ ಇವರ ಸಂಯುಕ್ತ ಆಶ್ರಯದಲ್ಲಿ ಕಲಬುರಗಿ ತಾಲೂಕಿನ ಭೀಮನಗರ ಅಂಬೆಡ್ಕರ ಭವನದಲ್ಲಿ ಶಿಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಬಗ್ಗೆ ಮಾಹಿತಿ ನೀಡಲಾಯಿತು. 0–6 ವರ್ಷದಲ್ಲಿ ಮಕ್ಕಳಲ್ಲಿ ನ್ಯೂನ್ಯತೆ ಕಂಡುಬಂದರೆ ಮೂರು ತಿಂಗಳಲ್ಲಿ ಕತ್ತು ನಿಲ್ಲಬೇಕು ಒಂಬತ್ತು ತಿಂಗಳಲ್ಲಿ ಮಗು ಅಂಬೆಗಾಲು ಹಾಕಬೇಕು ಒಂದು ವರ್ಷದಲ್ಲಿ ಮಗು 2–3 ಪದಗಳ ಮಾತು ಆಡಬೇಕು, ಎರಡು ಮತ್ತು ಮೂರು ವಸ್ತುಗಳನ್ನು ಗುರುತಿಸಬೇಕು, 5–6 ವರ್ಷದ ಮಗು ತಾನಾಗಿಯೇ ಸಾಮಾಜಿಕವಾಗಿ ಎಲ್ಲರ ಜೊತೆ ಬೇರೆಯಬೇಕು, 6 ವರ್ಷದ ಮಗು ಕಡ್ಡಾಯವಾಗಿ ಶಾಲೆಗೆ ಹೋಗಬೇಕು ಎಂದು ತಿಳಿಸಿದರು. ಈ ಎಲ್ಲಾ ಮೇಲಿನ ಅಂಶಗಳು ಕಂಡು ಬರದೆಯಿದ್ದಲ್ಲಿ ಮಗುವಿನ ಬೆಳವಣಿಗೆ ಹಂತಗಳಲ್ಲಿ ಕುಂಠಿತ ಗೊಳ್ಳವುದು ಎಂದು ವಿಜಯಲಕ್ಷ್ಮೀ ಅವರು ಮಾಹಿತಿ ನೀಡಿದರು.

## "ಜೀವನ ಶೈಲಿ ಬದಲಿಸಿಕೋಳ್ಳಿ ಕ್ಯಾನ್ಸರ್ ನಿಂದ ದೂರವಿರಿ: ಫಾದರ್ ದೀಪಕ"




ಕಲಬುರಗಿ ಹೊನ್ನಕಿರಣಗಿ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ "ವಿಶ್ವಕ್ಯಾನ್ಸರ್ ದಿನಾಚರಣೆಯ" ಪ್ರಯುಕ್ತ ಜಾಥಾ ಕಾರ್ಯಕ್ರಮವನ್ನು ಸೇವಾಸಂಗಮ ಸಂಸ್ಥೆಯ ಈ ಜಾಥಕ್ಕೆ ರಿಬ್ಬನ್ ಕತ್ತರಿಸುವ ಮೂಲಕ ಶ್ರೀ ಸಿದ್ದಪ್ಪಾ ಶಾಲೆಯ ಉಸ್ತುವಾರಿ ಅಧ್ಯಕ್ಷರು ಹೋನ್ನಕಿರಣಗಿ, ಶ್ರೀ ಮಲಯ್ಯ ಮುಖ್ಯ ಗುರುಗಳು ಸರಕಾರಿ ಮಾದರಿ ಶಾಲೆ ಹೊನ್ನಕಿರಣಗಿ ಹಾಗೂ ಫಾದರ್ ದೀಪಕ್ ಸಹ ನಿರ್ದೇಶಕರು ಸೇವಾಸಂಗಮ ಸಂಸ್ಥೆ, ಕಲಬುರಗಿ ಚಾಲನೆಯನ್ನು ನೀಡಿದರು. ಇಡಿ ಗ್ರಾಮದಲ್ಲಿ ಜಾಥ ನಡೆಸಿದ ವಿಧ್ಯಾರ್ಥಿಗಳು ಕ್ಯಾನ್ಸರ್ ವಿರುದ್ದ ಘೋಷಣೆಗಳನ್ನು ಕೂಗಿ ಜನರಲ್ಲಿ ಜಾಗೃತಿ ಮೂಡಿಸಿದರು, ಫಾದರ್ ದೀಪಕ್ ಅವರು "ಮಾನವ ಸಂಘ ಜೀವಿಯಾಗಿದ್ದಾನೆ. ಪ್ರತಿಯೋಬ್ಬರು ಸಹಾಯ ಸಹಕಾರದಿಂದ ಕ್ಯಾನ್ಸರ್ ಕುರಿತು ಅರಿವನ್ನು ಮೂಡಿಸುತ್ತಾ ಹೊದರೆ ಒಂದು ದಿನ ಭಾರತವನ್ನು ಕ್ಯಾನ್ಸರ್ ಮುಕ್ತವಾಗಿ ಮಾಡಬಹುದಾಗಿದೆ" ಎಂದು ಹೇಳಿದರು. ಕಾರ್ಯಕ್ರಮವನ್ನು ಉದ್ಧೇಶಿಸಿ ಮಾತನಾಡಿದ ಶ್ರೀ ಜಿಲ್ಲಾ ಕುಟುಂಬ ಕಲ್ಯಾಣ ಇಲಾಖೆಯ ಎಂಟಲೋಜಿಸ್ಟ ಚಾಮರಾಜ ಅವರು "ಕ್ಯಾನ್ಸರ್‌ನಲ್ಲಿ ಹತ್ತು ಹಲವು ವಿಧಗಳಿದ್ದು ಅದರಲ್ಲಿ ರಕ್ತದ ಕ್ಯಾನ್ಸರ್ (ಬ್ಲೆಡ್‌ಕ್ಯಾನ್ಸರ್) ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತದೆ ಮತ್ತು ಇದು ಅತ್ಯಂತ ಭಯಾನಕವಾದ ರೋಗವಾಗಿದೆ ಸೇವಾಸಂಗಮ ಸಂಸ್ಥೆಯು ಕ್ಯಾನ್ಸರ ಅರಿವಿನ ಕಾರ್ಯಕ್ರಮವನ್ನು ಮಾಡುತಾ ಬಂದಿದ್ದಿರೆಂದು ಅಭಿನಂದನೆಗಳು ಸಲ್ಲಿಸುತ್ತೆನೆ ಎಂದು ಅವರ ಮಾತಿನ ಮೂಲಕ ಸಂಸ್ಥೆಗೆ ಪ್ರಶಂಸಿದರು.




ಕಾರ್ಯಕ್ರಮದಲ್ಲಿ ಮಕ್ಕಳಿಗೆ ಕ್ಯಾನ್ಸರ್ ರೋಗದ ಕುರಿತು ಮಾಹಿತಿಯನ್ನು ಸಂಸ್ಥೆಯ ಕಾರ್ಯಕರ್ತರಾದ ಶ್ರೀಯುತ ರಾಜಕುಮಾರ ಅವರು ಕ್ಯಾನ್ಸರ್ ಅನುವುದು ಮನುಷ್ಯನ ಪಾಲಿಗೆ ಅತ್ಯಂತ ಭಯಂಕಾರಿಯಾಗಿದೆ ಈ ರೋಗದಿಂದ ಬಳಲುತ್ತಿರುವವರು ಎಷ್ಟೇ ದುಡ್ಡು ಖರ್ಚು ಮಾಡಿದರು ಕೂಡ ಬದುಕು ಸಾಧ್ಯತೆ ತುಂಬ ಕಡಿಮೆ ಇರುತ್ತದೆ. ಆದ್ದರಿಂದ ಈ ರೋಗಕ್ಕೆ ತುತ್ತಾಗದೆ ಅದಕ್ಕೂ ಮೊದಲೆ ಇದರ ಕುರಿತು ಅರಿತುಕೊಂಡು ಉತ್ತಮವಾದ ಆಹಾರ ಸೇವನೆ ಮಾಡುವ ಮೂಲಕ ದುಶ್ಚಟಗಳಿಂದ ದೂರ ಉಳಿದು ಕ್ಯಾನ್ಸರ್ ಮುಕ್ತ ಸಮಾಜವನ್ನು ಕಟ್ಟೋಣ ಎಂದು ಹೇಳಿದರು. ಶಾಲೆಯ ಮುಖ್ಯಗುರುಗಳಾದ ಮಲಯ್ಯ ಗುತ್ತೆದಾರ ರವರು ನಮ್ಮ ಶಾಲೆ ಮಕ್ಕಳಿಗೆ ಈ ಕ್ಯಾನ್ಸರ ಜಾಥದ ಮೂಲಕ ಜಾಗೃತಿ ಮೂಡಿಸುದರಿಂದ ನಮ್ಮ ಮಕ್ಕಳು ಮತ್ತು ಗ್ರಾಮಸ್ಥರು ಉತ್ತಮ ರೀತಿಯಲ್ಲಿ ಸದ್ದುಪಯೋಗವನ್ನು ಪಡೆದುಕೊಂಡರು. ಎಂದು ಅವರು ಮಾತಿನ ಮೂಲಕ ಸಂಸ್ಥೆಗೆ ಅಭಿನಂದಿಸಿದರು. ಸಂಸ್ಥೆಯ ಸಂಯೋಜಕಿಯಾದ ಶ್ರೀಮತಿ ಶ್ವೇತಾರವರು ಸಂಸ್ಥೆಯ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ನುಡಿದರು. ಈ ಒಂದು ಕಾರ್ಯಕ್ರಮದಲ್ಲಿ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆನೆಕಾಲಿನ ರೋಗದ ತಂಡದವರಾದ ರಾಜ್ಯ ಮಟ್ಟದ ವ್ಯದ್ಯಧಿಕಾರಿಗಳಾದ ಡಾ. ಸೇಥಲ ಕಲ್ಲೂರ ಮತ್ತು ಡಾ. ಶುಭಂ, ಪ್ರಾಥಮಿಕ ಆರೋಗ್ಯ ಕೇಂದ್ರದ ವಿಶ್ವನಾಥರವರು, ಮತ್ತು ಸಿಬ್ಬಂದಿ ವರ್ಗದವರು, ಶಾಲೆಯ ಶಿಕ್ಷಕ ವೃಂದದವರು, ಸ್ಥಳಿಯ ಸಮಾಜ ಸೇವಾ ಸಂಸ್ಥೆಯ ಮುಖಂಡರು. ಆಶಾಕಾರ್ಯಕರ್ತಿಯರು ಹಾಗೂ ಸೇವಾಸಂಗಮ ಸಂಸ್ಥೆಯ ಕಾರ್ಯಕರ್ತರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಶ್ರೀ ದ್ರಾಕ್ಷಾಯಿನಿ ನಿರೂಪಿಸಿದರು,. ಶ್ರೀಮತಿ ನಂದಿನಿ ಸ್ವಾಗತಿಸಿದರು, ಕುಮಾರಿ ಅನಿತಾ ಅವರು ವಂದಿಸಿದರು.






# "ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾಸಂಘಮ ಸಂಸ್ಥೆ ಕಾರ್ಯಕ್ರಮಗಳು"

ಡೈಲಿ ನ್ಯೂಸ್

## ಆರ್ಬಿಟ್‌ನಿಂದ ಗಾಲಿಕುರ್ಚಿ ವಿತರಣೆ



• ದಿ ಡೈಲಿ ನ್ಯೂಸ್ ಹುಮನಾಬಾದ್

ಆರ್ಬಿಟ್ ಸಂಸ್ಥೆಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಗಾಲಿಕುರ್ಚಿ ವಿತರಣೆ ಮಾಡಲಾಯಿತು. ರವಿಕುಮಾರ ಪ್ರಾಸ್ತವಿಕವಾಗಿ ಮಾತನಾಡಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಬಲಗೊಳಿಸುವ ಉದ್ದೇಶದಿಂದ ಆರ್ಬಿಟ್ ಸಂಸ್ಥೆ ಅನೇಕ ಕಾರ್ಯ ಮಾಡುತ್ತಾ ಬರುತ್ತಿದೆ ಎಂದು ಹೇಳಿದರು.

ಎಂ.ಆರ್.ಡಬ್ಲ್ಯೂ ಶಿವಕುಮಾರ ಪಾಟಿಲ ಮಾತನಾಡಿ, ಆರ್ಬಿಟ್ ಸಂಸ್ಥೆಯ ವಿಕಲಚೇತನರಿಗಾಗಿ ಸಾಮಾಗ್ರಿಗಳು, ಸಾಧನ ಸಲಕರಣೆಗಳು ನೀಡಿ ಬಡ ಜನರ ಪಾಲಿಗೆ ಸಹಕಾರಿಯಾಗುತ್ತಿದೆ ಎಂದರು. ಪುರಸಭೆ ಅಧ್ಯಕ್ಷೆ ಪಾರ್ವತಿ ಶೇರಿಕಾರ, ಉಪಾಧ್ಯಕ್ಷ ಮುಕರಂಜಾ, ರೋಹನ, ಫಾದರ್ ವಿನಸೆಂಟ್ ಫಿರೇರಾ, ಫಾದರ ವಿಕ್ಟರ್ ವಾಸ, ಮಮತಾ, ವಿಜಯಕುಮಾರ, ಕವಿತಾ ಮಹಾದೇವಿ ಉಪಸ್ಥಿತರಿದ್ದರು.

KALABURGI Edition

ಡೈಲಿ ನ್ಯೂಸ್

## ಕ್ಯಾನ್ಸರ್ ಜಾಗೃತಿ ಜಾಥಾ



ಔರಾದ್: ಕ್ಯಾನ್ಸರ್ ಎಂಬುದು ಗುಣಪಡಿಸಬಹುದಾದಂತ ರೋಗವಾಗಿದ್ದು, ಬೇಗನೆ ಪತ್ತೆ ಹಚ್ಚುವುದರಿಂದ ಮೊದಲ ಹಂತದ ಕ್ಯಾನ್ಸರನ್ನು ಸಂಪೂರ್ಣ ಗುಣಪಡಿಸಬಹುದು ಎಂದು ತಹಶೀಲ್ದಾರ್ ಮಲ್ಲಶೆಟ್ಟಿ ಚಿದ್ರೆ ಹೇಳಿದರು. ಆರ್ಬಿಟ್ ಸಮಾಜ ಸೇವಾ ಸಂಸ್ಥೆ, ಹುಮ್ನಾಬಾದ್ ಆಯೋಜಿಸಿದ್ದ ಕ್ಯಾನ್ಸರ್ ಕುರಿತು ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಸಂಸ್ಥೆಯ ನಿರ್ದೇಶಕ ಫಾದರ್ ವಿಕ್ಟರ್ ವಾಸ ಮಾತನಾಡಿ, ಆರ್ಬಿಟ್ ಸಂಸ್ಥೆ ಬೀದರ್ ಜಿಲ್ಲೆಯಲ್ಲಿ 30 ವರ್ಷಗಳಿಂದ ಸಮಾಜ ಸೇವೆ ಮಾಡುತ್ತಿದ್ದು, ಇತ್ತೀಚೆಗೆ ಅನೇಕ ಮಂದಿ ಕ್ಯಾನ್ಸರ್ ಕಾಯಿಲೆಗೆ ತುತ್ತಾಗಿ ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿರುವುದರಿಂದ ಜನರಲ್ಲಿ ಜಾಗೃತಿ ಮೂಡಿಸುವ ಹಾಗೂ ಅವರ ಜೀವನವನ್ನು ಸುಧಾರಿಸುವ ಅವಶ್ಯಕತೆ ಇದ್ದು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು. ಸಿಪಿಐ ರಘುವೀರಸಿಂಗ್ ಠಾಕೂರ್, ಪಿಎಸ್‌ಐಗಳಾದ ವಾಸಿಮ್ ಪಟೇಲ್, ಸಿದ್ದಲಿಂಗ ಸಿಂಗಶೆಟ್ಟಿ, ಶಿಕ್ಷಕ ಅಮರ್, ಅನಿಲ್ ಕುಮಾರ್ ಸನ್ನೀ ಇತರರಿದ್ದರು.

## ಅಂಗವಿಕಲರಿಗೆ ಗಾಲಿ ಕುರ್ಚಿ ವಿತರಣೆ



ಹುಮನಾಬಾದ್: ಅಂಗವೈಕಲ್ಯ ದೌರ್ಭಾಗ್ಯ ಎಂದು ಭಾವಿಸಬಾರದು ಎಂದು ಆರ್ಬಿಟ್ ಸಂಸ್ಥೆಯ ನಿರ್ದೇಶಕ ವಿಕ್ಟರ್ ವಾಸ್ ತಿಳಿಸಿದರು.

ಪಟ್ಟಣದ ಹೊರವಲಯದ ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ 30ನೇ ವಾರ್ಷಿಕೋತ್ಸವದ ಪ್ರಯುಕ್ತ ಅಂಗವಿಕಲರಿಗೆ ಗಾಲಿಕುರ್ಚಿ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿಕಲಚೇನರಲ್ಲಿ ಆತ್ಮವಿಶ್ವಾಸ ಮೂಡಿಸುವ ಮೂಲಕ ಅವರ ಬಾಳಿನಲ್ಲೂ ಚೈತನ್ಯ ತುಂಬುವ ಕಾರ್ಯದಲ್ಲಿ ಆರ್ಬಿಟ್ ಸಂಸ್ಥೆ ತೊಡಗಿಸಿಕೊಂಡಿದೆ. ಅಸ್ವರ್ ಡಿಎಮ್ ಫೌಂಡೇಶನ್ ವತಿಯಿಂದ 37 ಜನರಿಗೆ ಗಾಲಿ ಕುರ್ಚಿ ವಿತರಣೆ ಮಾಡಿದ್ದೇವೆ ಎಂದು ತಿಳಿಸಿದರು.

ಪುರಸಭೆ ಅಧ್ಯಕ್ಷೆ ಪಾರ್ವತಿ ಶೇರಿಕರ್, ಉಪಾಧ್ಯಕ್ಷ ಮುಕ್ರಂ, ಫಾ.ವಿನ್ಸೆಂಟ್ ಫಿರೇರಾ, ಶಿವಕುಮಾರ ಪಾಟೀಲ, ರೋಹನ್, ಕವಿತಾ, ಮಹಾದೇವಿ, ಮಮತಾ, ವಿಜಯಕುಮಾರ್ ಸೇರಿದಂತೆ ಇತರರು ಇದ್ದರು.

## ಬಡ ಜನರಿಗೆ ಪ್ರಬಲಗೊಳಿಸುವ ಆರ್ಬಿಟ್ ಸಂಸ್ಥೆ: ರವಿಕುಮಾರ

ವಿಶ್ವದರ್ಶನ ಸುದ್ದಿ, ಕಳೆದ 30 ವರ್ಷದಲ್ಲಿ ಬಡ ಜನತೆಯನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಪ್ರಬಲಗೊಳಿಸುವ ಆರ್ಬಿಟ್ ಸಂಸ್ಥೆಯು ಎಂದು ಪ್ರಾಥಮಿಕ ನುಡಿಯಲ್ಲಿ ರವಿಕುಮಾರ್ ಹೇಳಿದರು.

ಬೀದರ್ ಜಿಲ್ಲೆಯ ಹುಮನಾಬಾದ ಪಟ್ಟಣದ ಆರ್ಬಿಟ್ ಸಂಸ್ಥೆಯು ಸಮಾಜ ಸೇವಾ ಸಂಸ್ಥೆ ಹುಮ್ನಾಬಾದ್ 30ನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ಗಾಲಿಕುರ್ಚಿ ವಿತರಣೆ ಕಾರ್ಯಕ್ರಮವನ್ನು ಜ.31ರಂದು ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿರುವ ರವಿಕುಮಾರ್ ಕಳೆದ 30 ವರ್ಷದಲ್ಲಿ ಬಡ ಜನತೆಯನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಪ್ರಬಲಗೊಳಿಸುವ ಉದ್ದೇಶದಿಂದ ಆರ್ಬಿಟ್ ಸಂಸ್ಥೆ ಬೀದರ್ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿದೆ ಸಂಸ್ಥೆಯು ಮಾಡುತ್ತಿರುವ



ಕೆಲಸ ಕಾರ್ಯಗಳ ಬಗ್ಗೆ ರವಿಕುಮಾರ್ ಪ್ರಾಸ್ತಾವಿಕ ನುಡಿಯಲ್ಲಿ ಹೇಳಿದರು.

ಕೆಲಸ ಕಾರ್ಯಗಳನ್ನು ಆರ್ಬಿಟ್ ಸಂಸ್ಥೆ ಹೆಮ್ಮೆಯಿಂದ ಸೇವೆ ಮಾಡುತ್ತಾ ಸರ್ಕಾರದ ಸೌಲಭ್ಯಗಳಲ್ಲಿ ತೊಡಗಿಸಿಕೊಂಡು ಸೇವೆ ಸಲ್ಲಿಸುತ್ತಾ ವಿಕಲಚೇತನರಿಗಾಗಿ ಸಾಮಾಗ್ರಿಗಳು ಸಾಧನ ಸಲಕರಣೆಗಳು ನೀಡಿ ತೊಂದರೆ ಆಗದಂತೆ ಗಾಲಿಕುರ್ಚಿ ವಿತರಣೆ ಕಾರ್ಯಕ್ರಮ ವಿಶೇಷ ವಿಕಲಚೇತನರಿಗೆ ಸಹಾಯ ಮಾಡುವಲ್ಲಿ ಆರ್ಬಿಟ್ ಸಂಸ್ಥೆ ಮುಂದಾಗಿದೆ ಎಂದು ಶಿವಕುಮಾರ ಪಾಟೀಲ್ ತಮ್ಮ ಅಭಿಪ್ರಾಯದಲ್ಲಿ ವ್ಯಕ್ತಪಡಿಸಿದ್ದರು. ಪ್ರಾದೇಶಿಕ ವ್ಯವಸ್ಥಾಪಕರು ಅತಿಥಿಗಳಾಗಿ ಆಗಮಿಸಿರುವ ರೋಹನ್ ಫ್ರಾಂಕೋ ರವರು ಬೆಂಗಳೂರಿನಲ್ಲಿ ಅನೇಕ ಸಂಸ್ಥೆಗಳಿಗೆ ಹಳ್ಳಿ ಪ್ರದೇಶಗಳಲ್ಲಿ ಗುರುತಿಸಿ ಫಲಾನುಭವಿಗಳಿಗೆ ಸರ್ಕಾರದ ಯೋಜನೆಗಳು ಜನರಿಗೆ ಸೇರಿದರೆ ಅವುಗಳು ಯಶಸ್ವಿಯಾಗುತ್ತವೆ ಸರ್ಕಾರದ ಯೋಜನೆಗಳು ಸರ್ಕಾರದಿಂದ ಒಂದು ಸಣ್ಣ ಒಂದು ಸಣ್ಣ ಕೊಡುಗೆ ಆಗಿರುತ್ತದೆ ಎಂದು ತಮ್ಮ ಅನಿಸಿಕೆಯಲ್ಲಿ ಹೇಳಿದರು.

ಸೇವೆಯು ಮಾಡಿದ್ರೆ ಸಾಲದು ಅಂಚಿನಲ್ಲಿರುವ ಜನರಿಗೆ ಸೇವೆ ತಲುಪಿಸುವ ಪ್ರಯತ್ನಿಸಬೇಕು ಕೆಲವು ವರ್ಷಗಳಿಂದ ವಿಕಲಚೇತನರಿಗೆ ಬೇರೆ ಬೇರೆ ಪದಗಳನ್ನು ಉಪಯೋಗಿಸುತ್ತಿದ್ದರು ಇದು ವಿಶೇಷ ವಿಕಲಚೇತನರು ಎಂದು ಕರೆಯುತ್ತಾರೆ ಅವರಿಗೆ ಗಾಲಿಕುರ್ಚಿ ಉಪಯೋಗಿಸಲು ಆಸ್ಟರ ಡಿ.ಎಂ. ಫೌಂಡೇಶನ್ ಅವರು ಸಹಾಯ ಮಾಡಿದ್ದಾರೆ ಅವರನ್ನು ಅಭಿನಂದಿಸುತ್ತೇವೆ ಎಂದು ಫಾ.ಸಿವಿನ್ಸೆಂಟ ಫಿರೇರಾ ಹೇಳಿದರು.

ಇದೆ ಸಂದರ್ಭದಲ್ಲಿ ಪಾರ್ವತಿ ಸೇರಿಕಾರ್ ಪುರಸಭೆ ಅಧ್ಯಕ್ಷರು, ಎಂ. ಡಿ. ಮುಕ್ರಾಂ ಪುರಸಭೆ ಉಪಾಧ್ಯಕ್ಷರು, ವಿಕ್ಟರ ವಾಸ್, ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ವರ್ಗದವರು ಇನ್ನಿತರ ಅನೇಕರು ಉಪಸ್ಥಿತರಿದ್ದರು. ಮಮತಾ ನಿರೂಪಿಸಿದರು. ವಿಜಯಕುಮಾರ ವಂದಿಸಿದರು.



ಔರಾದ್‌ನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕ್ಯಾನ್ಸರ್ ಜಾಗೃತಿ ಜಾಥಾದಲ್ಲಿ ತಹಸೀಲ್ದಾರ ಮಲ್ಲಶೆಟ್ಟಿ ಚಿದ್ರೆ, ಸಿಪಿಐ ರಘುವೀರಸಿಂಗ್ ಠಾಕೂರ್, ಪಿಎಸ್‌ಐ ಗಳಾದ ಸಿದ್ದಲಿಂಗ ಸಿಂಗಶೆಟ್ಟಿ, ವಸೀಮ್ ಪಟೇಲ್, ಅಮರ, ಅನಿಲಕುಮಾರ ಇತರರಿದ್ದರು.

## ಎಲ್ಲರಲ್ಲಿಯೂ ಕ್ಯಾನ್ಸರ್ ಅರಿವು ಮೂಡಲಿ

ಔರಾದ್: ಇತ್ತೀಚಿನ ಜೀವನ ಶೈಲಿಯಿಂದ ಕ್ಯಾನ್ಸರ್‌ಹೆಚ್ಚುತ್ತಿದ್ದು, ರೋಗದ ಬಗ್ಗೆ ಎಲ್ಲರಿಗೂ ಅರಿವು ಮೂಡಿಸಬೇಕಾಗಿದೆ. ಕ್ಯಾನ್ಸರ್‌ನ್ನು ಕಡೆಗಣಿಸದೆ ವೈದ್ಯರ ಬಳಿಗೆ ಹೋಗಿ ಚಿಕಿತ್ಸೆ ಪಡೆದರೆ ಖಂಡಿತ ಗುಣಮುಖವಾಗುತ್ತದೆ ಎಂದು ತಹಸೀಲ್ದಾರ್ ಮಲ್ಲ ಶೆಟ್ಟಿ ಚಿದ್ರೆ ಹೇಳಿದರು. ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ವೃತ್ತದಲ್ಲಿ ಹುಮನಾಬಾದ್‌ನ ಆರ್ಬಿಟ್ ಸಂಸ್ಥೆಯಿಂದ ಬುಧವಾರ ಹಮ್ಮಿಕೊಂಡಿದ್ದ ಕ್ಯಾನ್ಸರ್ ಜಾಗೃತಿ ಜಾಥಾದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಅನೇಕ ರೋಗಿಗಳು ವೈದ್ಯರ ಬಳಿಗೆ ಬರದೇ ಕೊನೆಯ ಹಂತದಲ್ಲಿ ತಪಾಸಣೆಗೆ ಒಳಪಡುತ್ತಾರೆ. ಈ ರೋಗದ ಲಕ್ಷಣ ಕಂಡುಬಂದಲ್ಲಿ ಸಮೀಪದ ಆರೋಗ್ಯ ಕೇಂದ್ರಗಳಿಗೆ ತೆರಳಿ ಪರೀಕ್ಷಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಸಿಪಿಐ ರಘುವೀರಸಿಂಗ್ ಠಾಕೂರ್, ಪಿಎಸ್‌ಐಗಳಾದ ಸಿದ್ದಲಿಂಗ ಸಿಂಗಶೆಟ್ಟಿ, ವಸೀಮ್ ಪಟೇಲ್, ಅಮರ, ಅನಿಲಕುಮಾರ ಇತರರಿದ್ದರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜಾಗೃತಿ ಜಾಥಾ ನಡೆಸಿ ಜಾಗೃತಿ ಮೂಡಿಸಲಾಯಿತು.

## ಆರ್ಬಿಟ್ ಸಮಾಜ ಸೇವಾ ಸಂಸ್ಥೆ ವತಿಯಿಂದ ಏರ್ಪಡಿಸಿದ ಕ್ಯಾನ್ಸರ್ ಕುರಿತ ಜಾಗೃತಿ:ತಹಸಿಲ್ದಾರ್ ಮಲ್ಲಶೆಟ್ಟಿ ಚಿದ್ರೆ

**ಪ್ರಜಾ ಪ್ರಸಿದ್ಧ ವಾರ್ತೆ**
**ಔರಾದ(ಬಿ) ಫೆ .12-**

ಇತ್ತೀಚಿನ ಜೀವನ ಶೈಲಿಯಿಂದಾಗಿ ಕ್ಯಾನ್ಸರ್ ಹೆಚ್ಚುತ್ತಿದ್ದೆ. ಎಲ್ಲರಿಗೂ ಈ ರೋಗದ ಬಗ್ಗೆ ಅರಿವು ಬೇಕಾಗಿದೆ. ಅಷ್ಟೇ ಅಲ್ಲ, ಹಾಗುತ ಕ್ಯಾನ್ಸರ್ ಅನ್ನು ಕಡೆಗಣಿಸಬೇಡಿ, ವೈದ್ಯರ ಬಳಿಗೆ ಹೋಗಿ ಚಿಕಿತ್ಸೆ ಪಡೆದರೆ ಖಂಡಿತ ಗುಣಮುಖವಾಗುತ್ತದೆ ಎಂದು ತಹಸಿಲ್ದಾರ್ ಮಲ್ಲ ಶೆಟ್ಟಿ ಚಿದ್ರೆ ನುಡಿದರು.



ಬುಧವಾರ ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ವೃತ್ತ ದಲ್ಲಿ ಆರ್ಬಿಟ್ ಸಂಸ್ಥೆ ಹುಮನಾಬಾದ್ ವತಿಯಿಂದ ಏರ್ಪಡಿಸಿದ ಕ್ಯಾನ್ಸರ್ ಜಾಗೃತಿ ಜಾಥದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಅನೇಕ ರೋಗಿಗಳು ವೈದ್ಯರ ಬಳಿಗೆ ತಪಾಸಣೆಗೆ ಬರದೇ ಕೊನೆಯ ಹಂತದಲ್ಲಿ ಬಂದು ತಪಾಸಣೆಗೆ ಒಳಪಡುತ್ತಾರೆ.

ಕ್ಯಾನ್ಸರ್ ಎಂಬುದು ಪಿಡುಗು ಅಲ್ಲ, ಇದು ಗುಣ ಪಡಿಸಬಹುದಾದಂತ ರೋಗವಾಗಿದ್ದು ಬೇಗನೆ ಪತ್ತೆ ಹಚ್ಚುವುದರಿಂದ ಮೊದಲ ಹಂತದ ಕ್ಯಾನ್ಸರನ್ನು ಸಂಪೂರ್ಣ ಗುಣಪಡಿಸಬಹುದು. ಹಾಗೂ ಕೊನೆಯ ಹಂತದ ರೋಗಿಗಳಿಗೆ ನೂತನ ವಿಧದ ಚಿಕಿತ್ಸೆಯಿಂದ ರೋಗ ಹತೋಟಿ ತರಬಹುದು ಎಂದರು.

ಜಾಗೃತಿ ಜಾಥಾವು ಪಟ್ಟಣದ ಸರಕಾರಿ ಆಸ್ಪತ್ರೆ ವತಿಯಿಂದ ಕೇಂದ್ರ ಬಸ್ ನಿಲ್ದಾಣದ ಮೂಲಕ ಕೃಷಿ ಉತ್ಪನ್ನ ಮಾರುಕಟ್ಟೆ ವೃತ್ತಕ್ಕೆ ಬಂದು ಮುಕ್ತಾಯಗೊಂಡಿತು. ಜಾಥಾದಲ್ಲಿ ಕ್ಯಾನ್ಸರ್ ಬಗ್ಗೆ ಅರಿವಿನ ಹಾಡುಗಳನ್ನು ಹಾಡಿ, ಘೋಷಣೆಗಳನ್ನು ಮಾಡಲಾಗಿತ್ತು. ಸಿ .ಪಿ ಐ ರಘುವೀರ್ ಸಿಂಗ್ ಠಾಕೂರ್, ಪಿಎಸ್ಐ ಗಳಾದ ಸಿದ್ದಲಿಂಗ ಸಿಂಗಶೆಟ್ಟಿ, ಇತರರಿದ್ದರು.

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

# TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಫೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೆಂಟರ್ ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

| | |
|---|---|
| Name | : Sevasangama Development Society |
| Account No | : 16040100022902 |
| IFSC Code | : FDRL0001604 |
| Bank | : Federal Bank |
| Branch | : Super Market Kalaburagi |

**Fr. Victor Anil Vas**
Director, Seva Sangama & ORBIT

Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102

Contact: 8660968063 / 9743112739 - Email: sevasangama2006@gmail.com / Website: www.sevasangama.in